ಮೈಸೂರ ಗೆಜೆಟ್.

ನಂ. 26 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1889.

ಬೆಂಗಳೂರು, ಶನಿವಾರ, ಜೂನ್ ತಾ|| 29, ಸನ್ 1889.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿವ್ಯೂಟ್ರ್ಸುಗಳು; ಪ್ರೋಸ್ಪೆಫಿಸ್ ನೋಟಿಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇಷ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 14ನೇ ಜೂನ್ 1889.

ನಂ. 244.—ಫನವನ್ನು ಹೊಂದಿದ ಶ್ರೀಮ್ಮ ಮಹಾರಾಜ ರಾಜಾಸಾಹೆಬ್ ಬಹದ್ದೂರವರು, ಚೀಫ್ ಕೋರ್ಟ್ ಜಡ್ಜ್‌ಯವರಾದ ಮೆ|| ಟಿ. ಆರ್. ಎ. ತಂಬುಚೆಟ್ಟ್ಯಯ್ಯಾರ್ ಯವರನ್ನು ವಿಶೇಷ ಕೆಲಸಗಳಿಗೋಸ್ಕರ ಫನವನ್ನು ಹೊಂದಿದ ಅವರ ಕೌನಸಲ್‌ಯಾನೇ ಸಭೆಯ ಮೆಂಬರ್ ತರೀಕ್ ಮುಂದಿನ ತಿಂಗಳು 15ನೇ ಮಧ್ಯಂ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ನೊಕರರ್ ಮಾಡಿರುತ್ತಾರೆ, ಮತ್ತು ಗವರ್ಮೆಂಟ್ ಅಡ್ವೊಕೇಟರಾದ ಮೆ|| ಸಿ. ವಿನಾಕ್ಷಯ್ಯನವರನ್ನ ಮೆ|| ತಂಬುಚೆಟ್ಟ್ಯಯ್ಯಾರ್ರವರು ಇತರ ಕೆಲಸದಮೇಲಿರುವ ಕಾಲದಲ್ಲಿ, ಚೀಫ್ ಕೋರ್ಟಿನ ಒಬ್ಬ ಜಡ್ಜ್‌ರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಅಜ್ಞಾಪಿಸಿರುತ್ತಾರೆ.

ಕೆ. ಶೇಷಾದ್ರಿಅಯ್ಯರ್,
ದಿವಾಣ, ಮೈಸೂರ್.

ತಾರೀಖು 8ನೇ ಜೂ 1889.

ಕ್ಯಾಂಪ್ ನಂ. 172.—ಫೈಂಚ್‌ರಾಕ್ಸ್ ಸಬ್ ಡಿವಿಜನ್ನಿನ ಅಸಿಸ್ಟೆಂಟ್ ಕಮಿಷನರ್ ವ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟರಾದ ಮೆ।। ಬಿ. ತಿರುಮಲಾಚಾರಿಯವರು, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 435ನೇ ಸೆಕ್ಷನ್ ಅನುಸರಿಸಿ ರಿಕಾರ್ಡು ತರಿಸತಕ್ಕ ಬಗ್ಯೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 174.—ಫಾರೆಸ್ಟ್ರ ಅಸಿಸ್ಟೆಂಟ್ ಕನ್‌ಸರ್‌ವೇಟರ್ ಮೆ।। ಸಿ. ನಾರಾಯಣರಾಯರು 3ನೇ ಗ್ರೇಡಿನಿಂದ 2ನೇ ಗ್ರೇಡಿಗೆ ಬಡ್ತೀ ಮಾಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 185.—ಕೋಲಾರ ಡಿಸ್ಟ್ರಿಕ್ಟ್ ಮುಳಬಾಗಲ್ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾದ ಸಿ. ಕೇಷವಾದ್ರಿಅಯ್ಯಂಗಾರ್ರಿಗೆ, ಸಾಹ್ಯೆವನ್ನು ಸ್ವದಸ್ತೂರ್ ಕನ್ನಡ ಭಾಷೆಯಲ್ಲಿ ಬರೆದುಕೊಳ್ಳುವಂತೆ ನಿಯಮಿಸಲ್ಪಟ್ಟಿರುತ್ತೆ.

ತಾರೀಖು 9ನೇ ಮೇ 1889.

ನಂ. 31.—ಶ್ರೀಮನ್ಮಹಾರಾಜಾ ಸರ್ಕಾರದವರು 1885ನೇ ಇಸವಿ IIIನೇ ನಂಬರ್ ರೆಗ್ಯುಲೇಷನ್ನಿಂದ ಮೈಸೂರು ದೇಶಕ್ಕೆ ಜಾರಿಗೆ ತರಲ್ಪಟ್ಟ 1881ನೇ ಇಸವಿ XXIIನೇ ನಂಬರ್ ಯಿಕ್ಸೈಸ್ ಆಕ್ಟಿನ 55ನೇ ಸೆಕ್ಷನಿನಿಂದ ಅವರಿಗೆ ಉಂಟುಮಾಡಲ್ಪಟ್ಟ ಅಧಿಕಾರಗಳ ಬೆಲೆಯಿಂದ "ಪರಾಯಿದೇಶದ ಸಾರಾಯಿ" ಮತ್ತು "ಪರಾಯಿದೇಶದ ಉಕ್ಕಿದ ಸಾರಾಯಿ" ಯಾ (ಚಿಲ್ಲರೆ ಯಾ ಒಟ್ಟು) ಮೂರಾಟವ ಬಗ್ಯೆ ಕೊಡಲ್ಪಡುವ ಲೈಸೆನ್ಸುಗಳಿಗೆ ಸಂಬಂಧಪಟ್ಟ ಇದರಡಿಕಂಡ ರೂಲ್ಸ್‌ಯಾನೇ ನಿಬಂಧನೆಗಳನ್ನು ಉಂಟು ಮಾಡುತ್ತಾರೆ.—

ರೂಲ್ 1.—3ನೇ ಸೆಕ್ಷನ್ ಅನುಸರಿಸಿ ಮತ್ತು ಸದರೀ ಆಕ್ಟಿನ ಕೆಲಸಗಳಿಗೋಸ್ಕರ, ಶ್ರೀಮನ್ ಮಹಾರಾಜಾ ಸರ್ಕಾರದವರು ನಿಯಮಿಸುವದೇನಂದರೆ:—

ಅರ್ಥ ವಿವರಣೆ.

(a) "ಪರಾಯಿದೇಶದ ಸಾರಾಯಿ" ಮತ್ತು "ಪರಾಯಿದೇಶದ ಉಕ್ಕಿದಸಾರಾಯಿ" ಅಂದರೆ ಯೂರೋಪ್, ಅಮೆರಿಕಾ ಯಾ ಆಸ್ಟ್ರೇಲಿಯಾದೆಲ್ಲಿನ ಯಾವ ಸ್ಥಳದಲ್ಲಾಗಲೀ ತಯಾರ್ ಮಾಡಲ್ಪಟ್ಟು, ಶ್ರೀಮನ್ ಮಹಾರಾಜಾ ಸರ್ಕಾರದವರಿಂದ ಮಂಜೂರ್ಮಾಡಲ್ಪಟ್ಟಂಥಾ ಗೊತ್ತಾದ ಗುಣಉಳ್ಳದ್ದಾಗಿ ಮೈಸೂರು ದೇಶಕ್ಕೆ ಆಮದ್ ಮಾಡಲ್ಪಟ್ಟ ಅಂಥಾ "ಸಾರಾಯಿ" ಯಾ "ಉಕ್ಕಿದ ಸಾರಾಯಿ" ಯಂದು ಅರ್ಥವಾಗತಕ್ಕದ್ದು.

(b) (ಜಾವಾ, ಸಿಲೋನ್, ಜೆಮೈಕಾ ಮತ್ತು ಇಂಡಿಯಾ ದೇಶದಲ್ಲಿನ ಯಾವ ಸ್ಥಳದಲ್ಲೀಯಾಗಲಿ ತಯಾರ್ಮಾಡಲ್ಪಟ್ಟ) ತಮೋಂ ಇತರ ಸಾರಾಯಿ ಮತ್ತು ಉಕ್ಕಿದ ಸಾರಾಯಿಯು "ಕಂತ್ರಿ ಸಾರಾಯಿ" ಯಾ "ಕಂತ್ರಿ ಉಕ್ಕಿದ ಸಾರಾಯಿ" ಯಂಬುದಾಗಿ ಸಂದರ್ಭಾನುಸಾರ ಎಣಿಸಲ್ಪಡತಕ್ಕದ್ದು.

ತೀರ್ವೆ.

ರೂಲ್ II.—(a) ಪರಾಯಿ ದೇಶದ ಸಾರಾಯಿ ಮತ್ತು ಪರಾಯಿ ದೇಶದ ಉಕ್ಕಿದ ಸಾರಾಯಿ ಯಿವುಗಳ ಮೇಲೆ ಶ್ರೀಮನ್ ಮಹಾರಾಜರವರ ಸರ್ಕಾರಕ್ಕೆ ಯಾವ ಆಬ್ಕಾರೀ ತೀರ್ವೆಯೂ ತೆರಬೇಕಾದ್ದಿಲ್ಲವು; ಮತ್ತು—

(b) ತಮೋಂ ಕಂತ್ರಿ ಸಾರಾಯಿ ಮತ್ತು ಕಂತ್ರಿ ಉಕ್ಕಿದ ಸಾರಾಯಿ ಯಿವುಗಳಮೇಲೆ ಸದರೀ ಸರ್ಕಾರಕ್ಕೆ ಆಬ್ಕಾರೀ ತೀರ್ವೆಯು ಪಾವತಿ ಮಾಡಲ್ಪಡಬೇಕು, ಮತ್ತು ಅಂಥಾ ಕಂತ್ರಿ ಸಾರಾಯಿ ಯಾ ಕಂತ್ರಿ ಉಕ್ಕಿದ ಸಾರಾಯಿಯು ಅಂಥಾ ಆಬ್ಕಾರೀ ತೀರ್ವೆ ಪಾವತಿ ಮಾಡಲ್ಪಡದೆಯೇ ಮೈಸೂರು ದೇಶಕ್ಕೆ ಆಮದ್ ಮಾಡಲ್ಪಡಕೂಡದು.

ಲೈಸೆನ್ಸುಗಳು ಯಾರಿಂದ ಮತ್ತು ಯಷ್ಟು ಕಾಲಕ್ಕೆ ಕೊಡಲ್ಪಡತಕ್ಕದ್ದು.

ರೂಲ್ III.—ಪರಾಯಿದೇಶದ ಸಾರಾಯಿ ಅಥವಾ ಪರಾಯಿದೇಶದ ಉಕ್ಕಿದಸಾರಾಯಿ ಯಾ ಈ ಯರಡರ ಬಿಕರಿಬಗ್ಯಾಗಿ ಲೈಸೆನ್ಸುಗಳು ಅಯಾ ಡಿಸ್ಟ್ರಿಕ್ಟಿನ ಡೆಪ್ಯೂಟಿ ಕಮ್ಮಿಷನರಿಂದ ಕೊಡಲ್ಪಡತಕ್ಕದ್ದು; ಮತ್ತು ಅಂಥಾ ಪ್ರತಿ ಲೈಸೆನ್ಸೂ ಆದು ಕೊಡಲ್ಪಟ್ಟ ಸರ್ಕಾರ್ ಸಾಲಿನ ಮಾರ್ಚಿ 31ನೇ ತಾರೀಖಿನ ವರಿಗೆ ವಾಯಿದೆ ಉಂಟಾಗಿ ಯಿರತಕ್ಕದ್ದು.

ಒಟ್ಟು, ಚಿಲ್ಲರೆ ವಗೈರೆ ಮೂರಾಟದ ಲೈಸೆನ್ಸು.

ರೂಲ್ IV.—IIIನೇ ರೂಲ್ ಅನುಸರಿಸಿ ಒಟ್ಟು ಬಿಕರೀ ಬಗ್ಯ್ಯೂ, ಚಿಲ್ಲರೆ ಬಿಕರೀ ಬಗ್ಯ್ಯೂ, ಹೊಟೇಲ್‌ಗಳಲ್ಲಿ ಬಿಕರೀ ಬಗ್ಯ್ಯೂ ಮತ್ತು ರಿಫ್ರೆಷ್‌ಮೆಂಟ್ ರೂಂ ದುಕಾನ್‌ಗಳಲ್ಲಿ ಬಿಕರಿಬಗ್ಯ್ಯೂ ಕೊಡಲ್ಪಡುವ ಲೈಸೆನ್ಸುಗಳು ಬೇರೆಬೇರೆಯಾಗಿ ಯಿರತಕ್ಕದ್ದು; ಆದರೆ ವಬ್ಬ ಮನುಷ್ಯನು ಯರಡು ಹೆಚ್ಚು ಲೈಸೆನ್ಸುಗಳನ್ನು ಉಂಟುಗಿರಬಹುದು.

ಲೈಸೆನ್ಸಿನ ದರಗಳು.

ರೂಲ್ V.—IIIನೇ ರೂಲ್ ಅನುಸರಿಸಿ ಕೊಡಲ್ಪಡುವ ಪ್ರತಿ ಲೈಸೆನ್ಸಿಗೂ ಇದರಡಿಕಂಡ ದರದಂತೆ ಲೈಸೆನ್ಸು ಫೀ ವಸೂಲ್ ಮಾಡಲ್ಪಡತಕ್ಕದ್ದು:—

		ರೂ.	
ಒಟ್ಟು ವಾರಾಟದ ಲೈಸೆನ್ಸಿಗೆ	.. ..	25	31ನೇ ಮಾರ್ಚಿಗೆ ಆಖೈರಾಗುವ ಸಾಲ್ ಯಾ ಅದರ ಕೆಲವು ಕಾಲಕ್ಕೆ.
ಚಿಲ್ಲರೆ—ಡಿಟೋ ಡಿಟೋ	.. ..	50	
ಹೊಟೇಲ್ ಲೈಸೆನ್ಸಿಗೆ	.. ..	25	
ರಿಫ್ರೆಷ್‌ಮೆಂಟ್ ರೂಮ್ ದುಕಾನಿನ ಲೈಸೆನ್ಸಿಗೆ	.. ..	25	

(ಷರಾ.—ಬೆಂಗಳೂರು ಮತ್ತು ಮೈಸೂರು ಷಹರ್‌ಗಳಲ್ಲಿ ಚಿಲ್ಲರೆ ವಾರಾಟದ ಬಗ್ಯೆ ಮತ್ತು ಹೊಟೇಲ್ ಯಾ ರಿಫ್ರೆಷ್‌ಮೆಂಟ್‌ರೂಂ ದುಕಾನಿಗೋಸ್ಕರ ಲೈಸೆನ್ಸ್ ಪಡೆದಿರುವ ಪ್ರತಿ ಮನುಷ್ಯನೂ ಮೇಲ್ಕಂಡ ಲೈಸೆನ್ಸ್ ಫೀ ಮೊಬಲಗು ಪಾವತಿ ಮಾಡುವದು ಖಾಯ್ದೆ ಮ್ಯುನಿಸಿಪಲ್ ರೆಗ್ಯುಲೇಷನಿನ 58ನೇ ಸೆಕ್ಷನ್ ಅನುಸರಿಸಿ ತಾನು ವಹಿವಾಟು ನಡಿಸುವ ಸ್ಥಳವನ್ನು ರೆಜಿಸ್ಟ್ರಿ ಮಾಡಿಸಲಿಕ್ಕೂ ಅಂಥಾ ರೆಜಿಸ್ಟ್ರೇಷನ್ ಸರಿಟಿಫಿಕೇಟು ಪಡೆಯುವ ಬಗ್ಯೆ ಸದರಿ ರೆಗ್ಯುಲೇಷನಿನ 0 11ನೇ ಗುರ್ತಿನ ಷೆಡ್ಯೂಲಿನ IIನೇ ಕ್ಲಾಸ್, IIIನೇ ಕ್ಲಾಸ್ ಅಥವಾ IVನೇ ಕ್ಲಾಸ್ ಅನುಸರಿಸಿ ಸಾಲಿಯಾನಾ ವಂದು ಫೀಜು ಮೊಬಲಗನ್ನು ಮ್ಯುನಿಸಿಪಾಲಿಟಿಗೆ ಪಾವತಿ ಮಾಡಲಿಕ್ಕೂ ಬದ್ಧನಾಗಿರುತ್ತಾನೆ.)

ರೂಲ್ VI.—IIIನೇ ರೂಲ್ ಅನುಸರಿಸಿ ಕೊಡಲ್ಪಟ್ಟ ಲೈಸೆನ್ಸಿನ ದೆಸೆಯಿಂದ, ಮೈಸೂರು ಗವರ್ಮೆಂಟ್ ಸೆಂಟ್ರಲ್ ಡಿಸ್ಟಿಲೇರಿಯಲ್ಲಿ ತಯಾರ್ಮಾಡಲ್ಪಟ್ಟ ಪ್ರೂಫಿಗೆ ಸಮನಾದ ಮತ್ತು ಪ್ರೂಫಿಗೆ ಮೇಲ್ಪಟ್ಟ "ಡಬಲ್ ಡಿಸ್ಟಿಲ್ಡ್" ಯಾನೇ ಯಿಮ್ಮಡಿ ಭಟ್ಟಿ ಯಿಳಿಸಿದ ಸಾರಾಯಿಯನ್ನಾಗಲೀ ಅಥವಾ ಒಡಂಬಡಿಕೆ ಪ್ರಕಾರ ಆಮದು ಮಾಡಲ್ಪಟ್ಟ್ 1861ನೇ ಇಸವಿ XXIIನೇ ಆಕ್ಟಿನ 7ನೇ ಸೆಕ್ಷನ್ ಅನುಸರಿಸಿ ತೆರಬೇಕಾದ ತೀರ್ವೆ ದರವನ್ನು ಪೂರ್ತಿಯಾಗಿ ಪಾವತಿ ಮಾಡಲ್ಪಟ್ಟ ಯಿಮ್ಮಡಿ ಭಟ್ಟಿ ಯಿಳಿಸಿದ ಕಂಟ್ರಿ ಸ್ಪಿರಿಟ್ ಸಾರಾಯಿಯನ್ನಾಗಲಿ ಯಾ ಸದರಿ ಡಿಸ್ಟಿಲೇರಿಯಿಂದ ವೊಪರ್‌ನಿಶ್ ಇದರಡಿಕಂಡ ಗುರ್ತಿನ ಛಾಪೆ ಲೇಬಲ್‌ನಿಶ್ ವದಗಿಸಬಹುದಾದ ಅಂಥಾ ಸಾರಾಯಿ ಯಾ ಕಂಟ್ರಿ ಸ್ಪಿರಿಟ್ ಸಾರಾಯಿಯು ಯಾವ ತಯಾರಿಯನ್ನಾಗಲೀ ಬಿಕರ್ಕೀ ಮಾಡುವದಕ್ಕೆ ಅಧಿಕಾರ ಉಂಟಾಗಿರತಕ್ಕದ್ದು.

ಡಬಲ್ ಡಿಸ್ಟಿಲ್ಡ್ ಯಾನೇ ಯಿಮ್ಮಡಿ ಭಟ್ಟಿ ಯಿಳಿಸಿದ ಸ್ಪಿರಿಟ್ ಸಾರಾಯಿ ಮತ್ತು ಆ ಸಂಬಂಧವಾದ ತಯಾರಿಯನ್ನು ಕುರಿತು.

ರೂಲ್ VII.—ಈ ರೂಲ್‌ನ ಅನುಸರಿಸಿ ರಿಫ್ರೆಷ್‌ಮೆಂಟ್ ರೂಮಿಗೆ ಲೈಸೆನ್ಸುಗಳು, ಬೆಂಗಳೂರು ವ ಮೈಸೂರು ಷಹರ್‌ಗಳಲ್ಲಿ ಮಾಪೆಯಾನಾ 25 ರೂಪಾಯಿಗಳಿಗೆ ಕಮ್ಮಿಯಿಲ್ಲದೆಯೂ ಅನ್ಯತ್ರ 10 ರೂಪಾಯಿಗಳಿಗೆ ಕಮ್ಮಿ ಯಿಲ್ಲದೆಯೂ ಕೊಡಲ್ಪಡತಕ್ಕದ್ದು.

ರೂಲ್ VIII.—ಯಾವ ಎಕ್ಸೈಸ್ ಆಫಿಸರಾದರೂ, ಈ ರೂಲ್ಸ್ ಅನುಸರಿಸಿ ವಬ್ಬ ಬಿಕರೀದಾರನು ಪರಾಯಿದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿದೇಶದ ಉಕ್ಕಿದ ಸಾರಾಯಿಯನ್ನು ಬಿಕರಿಮಾಡತಕ್ಕಂಥಾ ಯಾವದಾದರೂ ದುಕಾನ್ ಯಾ ಆವರಣವನ್ನ ಹಗಲಿನಲ್ಲಾಗಲೀ ಯಾ ರಾತ್ರಿಯಲ್ಲಾಗಲೀ ಯಾವ ಕಾಲದಲ್ಯಾದರೂ ಪ್ರವೇಶಿಸಿ ತನಿಖೆ ಮಾಡಬಹುದು.

ರೂಲ್ IX.—IIIನೇ ರೂಲ್ ಅನುಸರಿಸಿ ಕೊಡಲ್ಪಟ್ಟ ಲೈಸೆನ್ಸುಗಳು ಯಿದಕ್ಕೆ ಲಗ್ಗತ್ತಿರುವ ನಮೂನೆಯಲ್ಲಿರತಕ್ಕನ್ನು.

"ಪರಾಯಿ ದೇಶದ ಸಾರಾಯಿ" ಮತ್ತು "ಪರಾಯಿ ದೇಶದ ಉಕ್ಕಿದ ಸಾರಾಯಿ" ಇವುಗಳನ್ನು ಬಿಟ್ಟಾಗಿ ಮಾರುವ ಬಗ್ಯೆ ಲೈಸೆನ್ಸ್.

ಡಿಸ್ಟ್ರಿಕ್ಟಿನ

ಡೆಪ್ಯುಟಿ ಕಮ್ಮಿಷನರಾದ

ಯೆಂಬ

ನಾನು,

ಸ್ಥಳದಲ್ಲಿ ವಾಸವಾಗಿರುವ - ಮಗ

ನಾದ

ಯೆಂಬುವನಿಗೆ, ಇದರಡಿ ವಿಧಿಸಲ್ಪಟ್ಟ ಷರತ್ತುಗಳಿಗೆ ಬಳಪಟ್ಟು ಮತ್ತು ಸಾಲಿಯಾನಾ ರೂಪಾಯಿಗಳ
ಲೈಸೆನ್ಸು ಫೀ ಮೊಬಲಗನ್ನು ಪಾವತಿ ಮಾಡುವ ಷರತ್ತಿನ ಮೇಲೆ ಪರಾಯಿ ದೇಶದ ಸಾರಾಯಿ ಮತ್ತು ಪರಾಯಿ ದೇಶದ ಉಕ್ಕಿದ ಸಾ
ರಾಯಿಯನ್ನು ಸದರೀ ಸ್ಥಳದಲ್ಲಿರ
ತಕ್ಕಂಥಾ ಡೋರ್ ನಂಬರ್ ನೇ ದುಕಾನಿನಲ್ಲಿ ಒಟ್ಟಾಗಿ ಬಿಕರೀ ಮಾಡುವ ಬಗ್ಗೆ ಯಿದರ ದೆಕೆಯಿಂದ ಅಧಿಕಾರ ಕೊಟ್ಟಿರುತ್ತೇನೆ.

ಷರತ್ತುಗಳು.

I. ಈ ಲೈಸೆನ್ಸುದಾರನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಕ್ಸೈಸ್ ಯಾನೇ ಅಬ್‌ಕಾರಿ ಕಾನೂಗಳಿಗೂ (1885ನೇ ಇಸವಿ IIIನೇ ನಂಬರ್ ಮೈಸೂರು ರೆಗ್ಯುಲೇರ್ಸ್ ಆದ) 1881ನೇ ಇಸವಿಯ XXIIನೇ ನಂಬರ್ ಯಕ್ಸೈಸ್ ಆಕ್ಟಿನ 55ನೇ ಸೆಕ್ಷನ್ ಅನುಸರಿಸಿ ಶ್ರೀಮನ್ಮಹಾರಾಜ ರಾಜಾ ಸಾಹೆಬ್ ಬಹದ್ದೂರವರ ಸರ್ಕಾರದಿಂದ ಉಂಟುಮಾಡಲ್ಪಟ್ಟ ತಮಾಂ ರೂಲ್ಸ್ ಯಾನೆ ನಿಬಂಧನೆಗಳಿಗೂ ಸಕಲವಿಷಯದಲ್ಲಿಯೂ ಬದ್ಧನಾಗಿರತಕ್ಕದ್ದು.

II. (*a*) ಈ ಲೈಸೆನ್ಸು, ಯಿದಕ್ಕೆ ಕೇರಿಸಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟ ಗುಣವುಳ್ಳ ಪರಾಯಿದೇಶದ ಸಾರಾಯಿ ಅಥವಾ ಪರಾಯಿದೇಶದ ಸಾರಾಯಿ ಮತ್ತು ಉಕ್ಕಿದ ಸಾರಾಯಿ ಅಥವಾ ಸಂದರ್ಭಾನುಸಾರ ಪರಾಯಿ ದೇಶದ ಉಕ್ಕಿದ ಸಾರಾಯಿ ಯಿವುಗಳನ್ನ ಮಾರುವ ಬಗ್ಗೆ ಕೊಡಲ್ಪಟ್ಟಿರುತ್ತೆ. ಡೆಪ್ಯುಟಿ ಕಮ್ಮಿಷನರವರು ತಾವು ಸ್ವತಃ ಆಗಲಿ ಅಥವಾ ಈ ಲೈಸೆನ್ಸುದಾರನ ಖಾಯಿಷ್ ಮೇಲಾಗಲಿ ಸದರೀ ಪಟ್ಟಿಗೆ ಹೆಚ್ಚು ಅಂಶಗಳನ್ನು ಕೇರಿಸುವದಕ್ಕೂ ಅಥವಾ ಬದಲಾಯಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಅಂಥಾ ಪ್ರತಿ ಹೆಚ್ಚು ಅಂಶಗಳೂ ಅಥವಾ ಬದಲಾವಣೆಗಳೂ ಡೆಪ್ಯುಟಿ ಕಮ್ಮಿಷನರವರ ರುಜುವಿನಿಂದ ದೃಢಪಡಿಸಲ್ಪಡತಕ್ಕದ್ದು.

(*b*) ಸದರೀ ಪಟ್ಟಿಯಲ್ಲಿ ನಮೂದಿಸಲ್ಪಡದ ಯಾ ಅದಕ್ಕೆ ಕೇರಿಸಲ್ಪಡದ ಯಾ ಮೇಲ್ಕಂಡಂತೆ ಬದಲಾಯಿಸಲ್ಪಡದ ಗುಣವುಳ್ಳ ಯಾವ ಪರಾಯಿದೇಶದ ಸಾರಾಯಿಯಾಗಲಿ ಉಕ್ಕಿದ ಸಾರಾಯಿಯಾಗಲಿ ಈ ಲೈಸೆನ್ಸು ಅನುಸರಿಸಿ ಮಾರಲ್ಪಡಕೂಡದು.

(ಯಾವ ಗುಣವುಳ್ಳ ಸಾರಾಯಿಯು ಬಿಕರೀ ಬಗ್ಗೆ ಈ ಲೈಸೆನ್ಸು ಕೊಡಲ್ಪಡುತ್ತೋ ಆ ಬಾಬತು ಪಟ್ಟಿಯನ್ನು ಯಿಲ್ಲಿ ದಾಖಲ್ಮಾಡತಕ್ಕದ್ದು.)

III. ಮೇಲ್ಕಂಡ ಸದರೀ ದುಕಾನಿನಲ್ಲಿ ಬಂದು ಸಲಕ್ಕೆ ಯರಡು ಯಿಂಪೀರಿಯಲ್ ಗ್ಯಾಲ್ಲನ್‌ಗಳಿಗಿಂತಲಾಗಲಿ ಅಥವಾ ಗೊತ್ತಾದ ಹನ್ನೆರಡು ಕ್ವಾರಟು ಪೀಪೆಗಳಿಗಿಂತ ಕಮ್ಮಿಯಾದ ತೇದಾದುಳ್ಳ ಪರಾಯಿ ದೇಶದ ಸಾರಾಯಿಯಾದರೂ ಅಥವಾ ಉಕ್ಕಿದ ಸಾರಾಯಿಯಾದರೂ ಬಿಕರಿ ಮಾಡಲ್ಪಡಕೂಡದು.

IV. (1) ಪರಾಯಿ ದೇಶದ ಯಾವ ತರಹೇ ಸಾರಾಯಿಯಾದರೂ ಅಥವಾ ಉಕ್ಕಿದ ಸಾರಾಯಿಯಾದರೂ, ಯಾವ ಯೂರೋಪಿಯರ್ ನಾನ್‌ಕಮ್ಮಿಷನ್ಡ್ ಆಫಿಸರಿಗಾಗಲಿ ಅಥವಾ ಪ್ರೈವೇಟ್ ಸೋಲ್ಜರಿಗಾಗಲಿ ಅಥವಾ ಸದರೀ ಜನಗಳಿಗೆ ಕೇರಿದ ಯಾ ಸಂಬಂಧಪಟ್ಟ ಯಾವ ಯೂರೋಪಿಯರ್ ಅಥವಾ ಈಸ್ಟ್ ಇಂಡಿಯರ್ ಹೊಂಗಸಿಗಾಗಲಿ, ಕಮಾಂಡಿಂಗ್ ಆಫಿಸರರ ಅಥವಾ ಅವರಿಂದ ಈ ಬಗ್ಯಾಗಿ ಅಧಿಕಾರ ಕೊಡಲ್ಪಟ್ಟ ಆಫಿಸರನ ಬರಹಮೂಲಕವಾದ ಅಪ್ಪಣೆ ವಿನಾ ಮಾರಲ್ಪಡಕೂಡದು, ಅಥವಾ ಎಷ್ಟುಮಟ್ಟಿಗಾದರೂ ಕೊಡಲ್ಪಡಕೂಡದು. ಮತ್ತು ಅಂಥಾ ಬರಹಮೂಲಕವಾದ ಅಪ್ಪಣೆಯು ಈ ಲೈಸೆನ್ಸುದಾರನಿಂದ ಅಂಥಾ ಬಿಕರೀಬಗ್ಯೆ ವಾಜಿಬ್ ತರೀಕೆ ಉಳಿಸಿಕೊಳ್ಳಲ್ಪಟ್ಟು ಅವಶ್ಯಕವಾದಾಗ ಯಾವ ಯೆಕ್ಸೈಜ್ ಆಫಿಸರಿಗಾದರೂ ತೋರಿಸಲ್ಪಡತಕ್ಕದ್ದು.

(2) ಸದರೀ ದುಕಾನಿನಿಂದ ಈ ಲೈಸೆನ್ಸುದಾರ ಅಥವಾ ಬಿಕರಿದಾರನಿಗೆ ಮರ್ಯಾದಸ್ಥರೆಂದು ಗೊತ್ತಾಗಿರುವ ಜನಗಳಿಗೆ ಮಾತ್ರವೇ ಬಿಕರಿ ಮಾಡಲ್ಪಡತಕ್ಕದ್ದು.

V. ಸದರೀ ಮೇಲ್ಕಂಡ ದುಕಾನು ರೋಜೀನಾ ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕದ್ದು. ಮತ್ತು ಪ್ರಾತಃಕಾಲ 6 ಘಂಟೆ ವರಿಗೆ ತೆರಿಯಲ್ಪಡಕೂಡದು.

VI. ಈ ಲೈಸೆನ್ಸುದಾರನು, ಅಸಿಸ್ಟೆಂಟ್ ಕಮ್ಮಿಷನರ ಹುದ್ದೆಗಿಂತ ಕಮ್ಮಿ ಯಿಲ್ಲದ ಯಾವ ಆಫಿಸರರಿಂದಾದರೂ ಅಪ್ಪಣೆ ಮಾಡಲ್ಪಟ್ಟಾಗ ಅವರಲ್ಲಿಯಾಗಲೀ ಅಂಥಾ ಆಫಿಸರರಿಂದ ಅಧಿಕಾರ ಕೊಡಲ್ಪಟ್ಟ ಯಾವ ಯಕ್ಸೈಸ್ ಆಫಿಸರರಲ್ಯಾಗಲೀ ಈ ಲೈಸೆನ್ಸು ಯಾವ ಸಾರಾಯಿವಗಾರಾಟದ ಬಗ್ಯಾಗಿ ಕೊಡಲ್ಪಟ್ಟಿರುತ್ತೋ ಅಂಥಾ ತಮಾಂ ಪರಾಯಿದೇಶದ ಸ್ಪಿರಿಟ್ ಸಾರಾಯಿ ಮತ್ತು ಉಕ್ಕಿದ ಸಾರಾಯಿ ಯಿವುಗಳ ಆವಜ್ ತೋರಿಸುವ ಅಸಲ್ ಯಿನ್‌ವಾಯಿಸ್ ಯಾನೆ ಪಟ್ಟಿಯನ್ನ ಹಾಜರ್ ಮಾಡಲು ಬದ್ಧನಾಗಿರತಕ್ಕದ್ದು.

VII. ಈ ಲೈಸೆನ್ಸುದಾರನು ರೂಲ್ಸ್ ಅನುಸರಿಸಿ ಕೊಡಲ್ಪಟ್ಟ ಒಟ್ಟು ಯಾ ಚಿಲ್ಲರೆ ಬಿಕರೀದಾರನಿಗೆ ಯಾವ ಪರಾಯಿ ದೇಶದ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನಾಗಲಿ ಅಂಥಾ ಸಾರಾಯಿಯನ್ನ ಸದರೀ ಒಟ್ಟು ಯಾ ಚಿಲ್ಲರೆ ಬಿಕರೀದಾರನು ಮಾರುವ ಬಗ್ಯೆ ಅವನ ಲೈಸೆನ್ಸಿನ ದೆಕೆಯಿಂದ ಅಧಿಕಾರ ಪಡೆದಿದ್ದರೆ ಹಾಂಗೆ ವರ್ಗಮಾಡಬಹುದು, ಯಾ ಬಿಕರೀ

ಮಾಡಬಹುದು. ಅಂಥಾ ಬಿಕರಿ ಯಾ ವರ್ಗವು ಯಕ್ಸೈಸ್ ಇಲಾಖೆಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಆವರ ಸ್ವೆ ಮೊಹರಿನಿ ಬರ ಹ ಮೂಲಕವಾದ ಹುಕುಂಯಾನೆ ಪ್ಯಾಸ್ ಚೀಟಿಯನ್ನು ದ್ವಿಪ್ರತಿಯಾಗಿ ಮುಂಚಿತವಾಗಿ ಪಡೆದ ಹೊರ್ತು ಮಾರಲ್ಪಡಕೂಡದು. ಡ್ಯುಪ್ಲಿ ಕೇಟ್ ಪ್ಯಾಸ್ ಚೀಟಿಯು, ಅಂಥಾ ಬಿಕರೀ ಯಾ ವರ್ಗಕ್ಕೋಸ್ಕರ ಹಾಂಗೆ ಬಿಕರಿ ಯಾ ವರ್ಗದ ಮೂಲಕ ಪಡೆದ ಲೈಸೆನುದಾರನಲ್ಲಿ ಪಾಜರ್ ತರೀಕೆ ಉಳಿಕೆಮಾಳ್ಳಲ್ಪಟ್ಟು ಯಕ್ಸೈಸ್ ಇಲಾಖೆಯ ಯಾವ ಆಫಿಸರೇ ಆಗಲಿ ಅಪೇಕ್ಷಿಸಿದಾಗ ಪಾಜರ್ಮಾಡಲ್ಪಡತಕ್ಕದ್ದು, ಮತ್ತು ಬರಿಜನಲ್ ಪ್ಯಾಸ್ ಚೀಟಿಯು ಖರೀದಿದಾರ ವ ಬಿಕರೀದಾರರಿಂದ ತಾರೀಖ ನಮೂದಿಸಿ ರುಜು ಮಾಡಲ್ಪಟ್ಟು ಯಕ್ಸೈಸ್ ಇಲಾಖೆಯಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ವಾಪಸ್ ಮಾಡಲ್ಪಡತಕ್ಕದ್ದು.

VIII. ಈ ಲೈಸೆನುದಾರನು, ರೋಜೇನಾ ತಿಂಗಳು ವ ತಾರೀಖು ನಮೂದಿನಿಂದ ತಾನು ಪಡೆದ ಪರಾಯಿದೇಶದ ಸ್ಪಿರಿಟ್ ಸಾರಾಯಿ ವ ಉಸ್ಕ್ರಿದ ಸಾರಾಯಿಯ ತೇದಾದು ವ ತಪಶೀಲನ್ನೂ ಅವು ಸರಬರಾಯಿ ಮಾಡಲ್ಪಟ್ಟ ವರ್ಗವನ್ನೂ ಬಿಕರೀ ಮಾಡಲ್ಪಟ್ಟ ತೇದಾದು ಮತ್ತು ಕಿಮ್ಮತನ್ನೂ, ಬಿಕರಿಗೆ ಪಡೆದ ಮನುಷ್ಯ ಫಲಾನೆಯವನೆಂಬದನ್ನೂ ಮತ್ತು ಹಾಜರಿಮಲ್ಲಿ ತಿಲ್ಲ ಯಿರತಕ್ಕ ತೇದಾದನ್ನೂ ಸುದಾ ಸಾಚಾ ವ ಕರಾರ್‌ವಾಕಾ ಆಗಿ ಲೆಖ್ಖ ಬರೆದಿಡತಕ್ಕದ್ದು. ಅಂಥಾ ಲೆಖ್ಖವು ಯಕ್ಸೈಸ್ ಇಲಾಖೇ ಆಫಿಸರರಿಂದ ಯಾ ವಾಗಲಾಗಲಿ ತನಿಖಿ ನೋಡಲ್ಪಡತಕ್ಕ ಬಗ್ಗೆ ಹಾಜರಿರತಕ್ಕದ್ದು. ಈ ಬಾಬತು ಲೆಖ್ಖವ ಗೋಷ್ವಾರೆಯು, ಅದನ್ನು ಬರಮಾಡಿಕೊಳ್ಳುವ ದಕ್ಕೆ ನಿಯಮಿಸಲ್ಪಟ್ಟ ಆಬ್‌ಕಾರೀ ಆಫಿಸರರಿಗೆ ದ್ವಿಪ್ರತಿಯಾಗಿ ತಯಾರ್ಮಾಡಲ್ಪಟ್ಟು ವಾಹೆಯಾನಾ ಕಳುಹಿಸಲ್ಪಡತಕ್ಕದ್ದು, ಅವರು ತನಿಖೆಯಿಂದ ಡೆಪ್ಯುಟಿ ಕಮ್ಮಿಷನರವರ ಯಕ್ಸೈಸ್ ಇಲಾಖೆಗೆ ರವಾನಿಸತಕ್ಕದ್ದು.

IX. ಈ ಲೈಸೆನು ಕ್ರಯ, ದಾನ, ಆಧಾರ ಮೂಲಕವಾಗಲೀ ಯಾ ಅನ್ಯಥಾ ಆಗಲೀ ಪರಭಾರೆ ಮಾಡಲ್ಪಡಕೂಡದು. ಮತ್ತು ಅದರಲ್ಲಿ ನಮೂದಾದ ಮನುಷ್ಯನು ವಿನಾ, ಇತರ ಯಾರಿಗೂ ಅದರಲ್ಲಿ ಕಂಡಂತೆ ನಡಿಯುವದಕ್ಕೆ ಅಧಿಕಾರ ವಿರುವದಿಲ್ಲ.

X. ಈ ಲೈಸೆನುದಾರನು, ದುಕಾನಿನಲ್ಲಿ ತನಿಸೋಸ್ತರ ಕೆಲಸ ನಡಿಸುವ ಬಗ್ಯಾಗಿ ಒಬ್ಬ ದುರ್ಕಾದಾರ ಯಾ ಬಿಕರೀದಾರನನ್ನು ನೇಮಿಸಬಹುದು, ಪರಂತು ಅಂಥಾ ಮನ್ಯುಷ್ಯ ಯಾ ಮನುಷ್ಯನ ಪೆಸರು ಮುಂಚಿತವಾಗಿ ಡೆಪ್ಯುಟಿ ಕಮ್ಮಿಷ್ನರವರ ಆಫೀಸಿನಲ್ಲಿ ರೆಜಿಸ್ಟರು ಮಾಡಲ್ಪಟ್ಟು ಅಂಥಾ ದುರ್ಕಾದಾರ ಯಾ ಬಿಕರೀದಾರನ ಹೆಸರು ಈ ಲೈಸೆನಿನ ಮೇಲ್‌ಭಾಗದಲ್ಲಿ ನಮೂದ್ ಮಾಡಲ್ಪಡಬೇಕು.

XI. ಮೇಲ್ಕಂಡ ಯಾವದೊಂದು ಷರತ್ತುಗಳಾದರೂ ಉಲ್ಲಂಘಿಸಲ್ಪಟ್ಟರೆ ಲೈಸೆನ್‌ದಾರನು, ಯಕ್ಸೈಸ್ ಕಾನೂನಿನಿಂದಲೂ ಮತ್ತು ಅದಕ್ಕೆ ಸಂಬಂಧಪಟ್ಟ ರೂಲ್‌ಸ್‌ಗಳಿಂದಲೂ ಆ ಬಗ್ಯಾಗಿ ವಿಧಿಸಲ್ಪಟ್ಟಿರುವ ತಮಾಂ ದಂಡನೆಗಳಿಗೆ ಗುರಿಯಾಗತಕ್ಕದ್ದಲ್ಲದೆ (1885ನೇ ಇಸವಿ IIIನೇ ನಂಬರ್ ಮೈಸೂರು ರೆಗ್ಯುಲೇಷನ್ ಆಕ್ಟ) 1881ನೇ ಇಸವಿ XXIIನೇ ನಂಬರ್ ಆಕ್ಟಿನ 13ನೇ ಸೆಕ್ಷನ್ ಅನುಸರಿಸಿ ಡೆಪ್ಯುಟಿ ಕಮ್ಮಿಷ್ನರವರಿಂದ ಅವರ ಯುಕ್ತಾನುಸಾರ ಸದರೀ ಲೈಸೆನ್ಸು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

XII. ಈ ಲೈಸೆನ್ಸು 18 ನೇ ಇಸವಿ ಮಾರ್ಚ್ 31ನೇ ತಾರೀಖುವರೆಗೆ ಜಾರಿಯಲ್ಲಿರತಕ್ಕದ್ದು.

ಡಿಸ್ಟ್ರಿಕ್ಟು

ಡೆಪ್ಯುಟಿ ಕಮ್ಮಿಷನರ್ ಆಫಿಸು

ತಾರೀಖು

ಡೆಪ್ಯುಟಿ ಕಮ್ಮಿಷನರ
ಡಿಸ್ಟ್ರಿಕ್ಟು.

ಸ್ಥಳದ,

ವಾಸಸ್ಥಾನದ ಮತ್ತು

ನಮಗನಾದ ಇದರಡಿ ರುಜು ಮಾಡಿರುವ ಹೆಸರುಳ್ಳ

ಮೇಲ್ಕಂಡ ಲೈಸೆನುದಾರನಾದ ನಾನು, ನನಿಸೋಸ್ತರವು ನನ್ನ ವಾರಸುದಾರರು, ನ್ಯಾಯವಾದ ಪ್ರತಿನಿಧಿಗಳು ಮತ್ತು ನನ್ನಿಂದ ವರ್ಗ ಪಡೆದವರು ಇವರುಗಳೂಸೋಸ್ತರವೂ ಮೇಲ್ಕಂಡ ಲೈಸೆನ್ಸಿನಲ್ಲಿ ವಿವರಿಸಲ್ಪಟ್ಟ ತಮಾಂ ಷರತ್ತು ವ ಬಿಡಂಬಡಿಕೆಗಳನ್ನ ಯಿದರಿಂದ ಬಪ್ಪು ರುತ್ತೇನೆ.

ನೇ ತಾರೀಖಿನಲ್ಲಿ

ನಮ್ಮಗಳ ರೂಬರೂ ಆಫಿಸಿನಲ್ಲಿ

ರುಜೂ ಮೊಹರ್ ಮಾಡಿ ಕೊಡಲ್ಪಟ್ಟಿರುತ್ತೆ.

ಸಾಕ್ಷಿಗಳು { 1. _____ 2. _____ 3. _____ } ಲೈಸೆನುದಾರ { _____ _____ _____ }

ಯಾರ ಮುಂದೆ ರುಜೂ ಮಾಡಲ್ಪಟ್ಟಿತೋ
ಅಂಥಾ ಆಫಿಸರರ ರುಜು.

"ಪರಾಯಿ ದೇಶದ ಸ್ಪಿರಿಟ್ ಸಾರಾಯಿ" ವ "ಪರಾಯಿ ದೇಶದ ಉಕ್ಕಿದ ಸಾರಾಯಿ" ಯನ್ನ ಚಿಲ್ಲರೆಯಾಗಿ ಮಾರುವ ಒಗ್ಗೆ ಲೈಸೆನ್ಸ್.

ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನ

ರಾದ ಯಂಬ ಹೆಸರುಳ್ಳ ನಾನು

ಲ್ಲಿ ವಾಸವಾಗಿರುವ

ನ ಮಗನಾದ ಯಂಬವನಿಗೆ

ಇವರಡಿ ಕಂಡ ಷರತ್ತುಗಳಿಗೂ ಮತ್ತು ಸಾಲಿನಾ ರೂಪಾಯಿಗಳ ಲೈಸೆನ್ಸ್ ಫೀ ತೆರಲಿಕ್ಕೂ ಬದ್ಧನಾಗಿ

ಲ್ಲಿರುವ ನೇ ನಂಬರುಳ್ಳ ದುಕಾನಿನಲ್ಲಿ ಪರಾ

ಯಿ ದೇಶದ ಸ್ಪಿರಿಟ್ ಸಾರಾಯಿ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನ ಚಿಲ್ಲರೆಯಾಗಿ ಮಾರಲಿಕ್ಕೆ ಇದರಿಂದ ಅಧಿಕಾರ ಕೊಟ್ಟಿರುತ್ತೆನೆ.

ಷರತ್ತುಗಳು.

I. ಈ ಲೈಸೆನುದಾರನು, ತತ್ಕಾಲಜಾರೀಲಿರುವ ಎಕ್ಸೈಜ್ ಕಾನೂನಿಗೂ, ಮತ್ತು (1885ನೇ ಇಸವಿಯ ಮೈಸೂರ IIIನೇ ರಗ್ಯೂಲೇಷನ್) 1881ನೇ ಇಸವಿಯ XXIIನೇ ಯಕ್ಸೈಜ್ ಆಕ್ಟಿನ 55ನೇ ಸೆಕ್ಷನ ಅನುಸರಿಸಿ ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಏರ್ಪಡಿಸೋಣಾವ ಯಲ್ಲ ನಿಬಂಧನೆಗಳ ಮೇರಿಗೆ ನಡೆದುಕೊಳ್ಳಲಿಕ್ಕೆ ಬದ್ಧನಾಗಿರತಕ್ಕದ್ದು.

II. (a) ಇದಕ್ಕೆ ಲಗ್ಗತ್ತಾಯಿರುವ ಪಟ್ಟಿಯಲ್ಲಿ ವಿವರಿಸೋಣಾದ ಗುಣಗಳುಳ್ಳ (ಪರಾಯಿ ದೇಶದ ಸ್ಪಿರಿಟ್ ಸಾರಾಯಿ, ಯಾ "ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಉಕ್ಕಿದ ಸಾರಾಯಿಯನ್ನಾಗಲಿ, ಅಥವಾ ಸಂಗತ್ಯಾನುಸಾರ ಪರಾಯಿ ದೇಶದ ಉಕ್ಕಿದ ಸಾರಾಯಿ) ಯನ್ನಾಗಲಿ ಮಾರಲಿಕ್ಕೆ ಈ ಲೈಸೆನ್ಸು ಕೊಡಲ್ಪಟ್ಟಿರುತ್ತೆ, ಡೆಪ್ಯೂಟಿ ಕಮ್ಮಿಷನರು ತಾವಾಗಿಯೇ ಆಗಲಿ ಅಥವಾ ಲೈಸೆನ್ಸ್‌ದಾರನು ಅರ್ಜಿ ಕೊಟ್ಟ ಮೇಲಾಗಲಿ, ಅಂಥಾ ಪಟ್ಟಿಗೆ ಹೊಸದಾಗಿ ಕೇರಿಸುವದಕ್ಕೂ ಅಥವಾ ಬದಲಾಯಿಸುವದಕ್ಕೂ ಸ್ವತಂತ್ರವುಳ್ಳವರಾಗಿದ್ದಾರೆ. ಪಟ್ಟಿಯೊಳಗಣ ಪ್ರತಿ ಬದಲಾವಣೆಗೂ ಡೆಪ್ಯೂಟಿ ಕಮ್ಮಿಷನರವರು ರುಜೂ ಮಾಡತಕ್ಕದ್ದು.

(b) ಸದರೀ ಪಟ್ಟಿಯಲ್ಲಿ ಎರಿಸಾನಕಿರೊಂಬಿಗೆ ಮಿರುವ ಗುರ್ತುಗಳ ನೈಜ ಮಾಹಿತಿಯಿಲ್ಲದ ಯಾವ ಸಾಮಾ ದೇರದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನಾಗಲಿ ಈ ಲೈಸೆನಿನ ದೆಸೆಯಿಂದ ಮಾರಲ್ಪಡತಕ್ಕದ್ದಲ್ಲವು.

(ಯಾವ ಗುರ್ತಿನ ಸಾರಾಯಿಯು ಬಿಕರಿಬಾಬ್ತಿಗೆ ಈ ಲೈಸೆನ್ಸು ಕೊಡಲ್ಪಡತಕ್ಕದ್ದೋ ಆ ಬಾಬತು ಪಟ್ಟಿಯನ್ನು ಯಿಸ್ಟ್ ದಾಖಲ್ಮಾಡತಕ್ಕದ್ದು).

III. ಪರಾಯಿ ದೇಶದ ಸ್ಪಿರಿಟ್ ಯಾ ಉಕ್ಕಿದ ಸಾರಾಯಿಯನ್ನು ಮೊದಲು ದಫೆಗೆ ಮೊದಲು ಕ್ವಾರ್ಟ್ ಕೀವೆ ಅಥವಾ ಮೊದಲು ಪೈಂಟ್ ಕೀವೆಗಿಂತಲೂ ಕಮ್ಮಿಯಾದ ತೇದಾದನ್ನು ದುಕಾನಿನಿಂದ ಮಾರತಕ್ಕದ್ದಲ್ಲವು.

IV. (1) ಯಾವ ಬಗೆಯಾದ ಪರಾಯಿದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನು ಯಪ್ಪುನಟ್ಟಿಗಾಗಲೀ ಕಮ್ಮಾರ್ಡಿಂಗ್ ಆಫಿಸರರ ಯಾ ಆ ಬಗ್ಗೆ ಅಂಥಾ ಆಫಿಸರಿಂದ ಕ್ರಮವಾಗಿ ಅಧಿಕಾರ ಹೊಂದಿದ ಯಾವನಾದರೊಬ್ಬ ಮನುಷ್ಯನ ಬರಹ ಮೂಲಕವಾದ ಅಪ್ಪಣೆ ಹೊರತು ಯಾವ ಯೂರೋಪಿಯರ್ ಕಾಕಮ್ಮಿಷನಡ್ ಆಫಿಸರ್ ಯಾ ಪ್ರೈವೇಟ್ ಸೋಲ್ಜರಿಗಾಗಲಿ ಯಾ ಸದರೀ ಜನಗಳಿಗೆ ಸಂಬಂಧಪಟ್ಟವ್ಯ ಯಾ ಕೀರಿದ ಯಾವ ಯೂರೋಪಿಯರ್ ಯಾ ಈಸ್ಟ್ ಇಂಡಿಯರ್ ಹಂಗಸರಿಗಾಗಲಿ ಮಾರಲೂಕೂಡದು, ಕೊಡಲೂಕೂಡದು. ಮತ್ತು ಅಂಥಾ ಬರಹ ಮೂಲಕವಾದ ಅಪ್ಪಣೆಯನ್ನು ಲೈಸೆನ್ಸಿದಾರನು ಹಾಗೆ ಮಾರಾಟ ಮಾಡಿದ್ದಕ್ಕಾಗಿ ದಸ್ತ್ಯವಜ್ ತರೀಕು ತನ್ನ ಬಳಿ ಯಿಟ್ಟುಕೊಂಡಿದ್ದು ಯಾವ ಯಕ್ಸೈಜ್ ಆಫಿಸರಾಗಲಿ ಕೇಳಿದಾಗ ಹಾಜರ್ಮಾಡತಕ್ಕದ್ದು.

(2) ಮೇಲೆ ಹೇಳೋಕಾವ ದುಕಾನಿನಲ್ಲಿ ನಡಿಯುವ ಮಾರಾಟನ್ನು ಲೈಸೆನ್ಸಿದಾರನಿಗೆ ಅಥವಾ ಬಿಕ್ರೀದಾರನಿಗೆ ಚೆನ್ನಾಗಿ ಗುರ್ತು ಳ್ಳ ಗೌರತೆವುಳ್ಳ ಮನುಷ್ಯರುಗಳಿಗೆ ಮಾತ್ರ ನಡಿಯತಕ್ಕದ್ದು.

V. ದುಕಾನಿನ ಆವರಣದೊಳಗೇನೇ ಕುಡಿಯಬ್ಬಹುವ ಬಗ್ಗೆ ಸಾರಾಯಿಯನ್ನು ಮಾರಲಿಕ್ಕೆ ಈ ಲೈಸೆನ್ಸಿನಿಂದ ಅಪ್ಪಣೆ ಉಂಟಾಗಿರುವದಿಲ್ಲ.

VI. ಸದರೀ ಅಂಗಡಿಯನ್ನು ಪ್ರತಿದಿನವೂ ರಾತ್ರೆ 9 ಘಂಟೆಗೆ ಮುಚ್ಚಬೇಕು. ಪ್ರಾತಃಕಾಲ 6 ಘಂಟೆವರವಿಗೂ ತೆರಿಯ ಕೂಡದು.

VII. ಆಸಿಸ್ಟೆಂಟ್ ಕಮ್ಮಿಷನರ ದರ್ಜೆಗೆ ಕಮ್ಮಿಯಿಲ್ಲದ ಯಾವ ಆಫಿಸರೇ ಆಗಲಿ ಅಥವಾ ಅಂಥಾ ಆಫಿಸರಿಂದ ಅಧಿಕಾರ ಹೊಂದಿದಂಥಾ ಯಾವ ಯಕ್ಸೈಜ್ ಆಫಿಸರೇ ಆಗಲಿ ಕೇಳಿದಾಗ ಲೈಸೆನ್ಸಿದಾರನು ಬಿಕರೀ ಬಗ್ಗೆ ಕೊಡೋಕಾವ ಈ ಲೈಸೆನ್ಸ್ ಅನುವಾರಿಸಿ ತೋರಿದಂಥಾ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿ ಯಿಪ್ಪುಗಳ ಅಸಲ್ ಇರವಾಯಿಸಿ ಲೆಕ್ಕವನ್ನು ಸಾಯಂಕ್ಕಾಲದಲಕ್ಕೆ ಬಚ್ಚನಾಗಿರಬೇಕ್ಕದ್ದು.

VIII. ಈ ಲೈಸೆನ್ಸಿದಾರನು ರೂಲ್ಸ್ ಅನುಸರಿಸಿ ಸರಾಯಿ ದೇಶದ ಯಾವ ಬಗೆಯಾದ ಸ್ಪಿರಿಟ್ ಯಾ ಉಕ್ಕಿದ ಸಾರಾಯಿಯನ್ನು ಮಾರಲಿಕ್ಕಾಗಿ ಲೈಸೆನ್ಸು ಪಡೆದಂಥಾ ಇತರ ಲೈಸೆನ್ಸಿದಾರನಿಗೆ ಸದರೀ ಸಾರಾಯಿಯನ್ನು ಮಾರಲೂಬಾರದು ಅಥವಾ ವರ್ಗ ಮಾಡಲೂಬಹುದು. ಹಾಗೆ ಮಾರುವಣಿ ಯಾ ವರ್ಗ ಮಾಡುವಣಿ ಈ ಬಗ್ಗೆಗಿ ಮುಂಚಿತವಾಗಿ ಎಕ್ಸೈಜ್ ಇಲಾಖೆಯಲ್ಲಿ ಡೆಪ್ಯುಟಿ ಕಮ್ಮಿಷನರವರ ರಜೂ ಮೊಹರಿನಿ ಪರಮಿಟ್ ಯಾನೆ ಬರಹ ಮೂಲಕವಾದ ರಹದಾರಿಯ ಬೇರದು ಪ್ರತಿಗಳನ್ನು ಪಡೆದ ಹೊರತು, ನಡಿಯಕೂಡದು. ಹಾಗೆ ಖರೀದಿ ಯಾ ವರ್ಗ ಮೂಲಕ ಪಡೆದ ಲೈಸೆನ್ಸಿದಾರನು ಆ ಬಗ್ಗೆಗಿ ಸದರೀ ರಹದಾರಿಯ ದುಯ್ಯೋಂ ಪ್ರತಿಯನ್ನು ದಸ್ತ್ಯವಜ್ ತರೀಕು ತನ್ನ ಬಳಿಯಿಟ್ಟುಕೊಂಡಿದ್ದು, ಯಕ್ಸೈಜ್ ಇಲಾಖೆಯ ಯಾವ ಆಫಿಸರಾಗಲಿ ಕೇಳಿದಾಗ ಹಾಜರ್ಮಾಡತಕ್ಕದ್ದು. ಸದರೀ ರಹದಾರಿಯ ಅವ್ವಲ್ ಪ್ರತಿಗೆ ವಿಕ್ರಯವಾದ ವ ಖರೀದಿದಾರ ಈ ಪೃಥಯಾತ್ರೆಗೂ ರಾಜಾವ ಮಾಡಿ ತಾರೀಖು ನಮೂದಿನಿ ಡೆಪ್ಯುಟಿ ಕಮ್ಮಿಷನರವರ ಯಕ್ಸೈಜ್ ಇಲಾಖೆಗೆ ವಾಪಸು ರವಾನೆ ಮಾಡತಕ್ಕದ್ದು.

IX. ಲೈಸೆನ್ಸಿದಾರನು ಯಿಡುವ ಲೆಕ್ಕಿದಲ್ಲಿ, ತಿಂಗಳು ತಾರೀಖು ವ ಪರಾಯಿ ದೇಶದ ಸ್ಪಿರಿಟ್ ವ ಉಕ್ಕಿದ ಸಾರಾಯಿಗಳ ತೀರಾಮ್ಮ, ವ ಖರೆಪೆಗಳು, ಯಾವ ಮೂಲಕವಾಗಿ ಪಡೆಯಕೊಂಡಿದ್ದು, ಬಿಕರೀ ಆದ ತೇದಾದುವ ಆವರ ಹೆಸರು, ಯಾವಾಗ ಬಿಕರೀ ಆಯಿತೊ ಆವನ ಹೆಸರು, ಮತ್ತು ರೋಜೆನಾ ಮಾಜೂದೀ ಸರಕ್ಕು ಯಿಪ್ಪುಗಳ ಸಾಮಾ ವ ಕಾರ್ಬಾರ್ ತಪಸೀಲು ನಮೂದುರತಕ್ಕದ್ದು. ಈ ಲೆಕ್ಕಿಗಳು ಯಾವಾಗಲೂ ಯಕ್ಸೈಜ್ ಇಲಾಖೆಯ ಆಫಿಸರುಗಳ ತನಖೀಗೆ ಗುರಿಯಾಗಿರತಕ್ಕದ್ದು. ಸದರೀ ಲೆಕ್ಕಿನ ನೋಟ್ಸ್ ಬರೆಯನ್ನು ತನಖೀಯಿಂದ ಡೆಪ್ಯುಟಿ ಕಮ್ಮಿಷನರವರ ಆಫಿಸಿನ ಯಕ್ಸೈಜ್ ಇಲಾಖೆಗೆರವಾನಿಸತಕ್ಕ ಬಗ್ಗಾಗಿ ಮೊಕರರಾಗಿರುವ ಯಕ್ಸೈಜ್ ಆಫಿಸರಬಳಿಗೆ ತಿಂಗಳಿಗೊಂದಾವರ್ತಿ ಯರಡು ಪ್ರತಿಗಳು ರವಾನಿಸಲ್ಪಡತಕ್ಕದ್ದು.

X. ಈ ಲೈಸೆನ್ಸು ಕ್ರಯ, ದಾನ, ಭೋಗ್ಯ ಅಥವಾ ಇನ್ಯಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ. ಮತ್ತು ಯಿದರಲ್ಲಿ ನಮೂದುರುವವನೇ ಹೊರತು ಲೈಸೆನ್ಸಿನ ಯಿರುವ ಆಗಲಿ ಈ ಲೈಸೆನ್ಸಿನ ಷರತ್ತುಗಳನ್ನನುಸರಿಸಿ ನಡಿಯಿಸಕ್ಕೆ ಅಧಿಕಾರ ವಿರುವದಿಲ್ಲ.

XI. ಲೈಸೆನ್ಸದಾರನು ದುಕಾನಿನಲ್ಲಿ ತನಿಗಾಗಿ ಕೆಲಸ ನಡಿಸತಕ್ಕ ಬಗ್ಗೆ ದುಕ್ಕಾದಾರನ್ನ ಯಾ ಬಿಕರೀದಾರನ್ನ ಮೊಕರ್ರಾಡ ಬಹುದು. ಪರಂತು ಅಂಥಾ ಮನುಷ್ಯ ಯಾ ಮನುಷ್ಯರ ಹೆಸರು ಮೊದಲೇ ಡೆಪ್ಯುಟಿ ಕಮ್ಮಿಷನರವರ ಆಫಿಸಿನಲ್ಲಿ ರಜಿಸ್ಟ್ರಾಗಿರತಕ್ಕದ್ದು. ಮತ್ತು ಅಂಥಾ ದುಕ್ಕಾದಾರ ಯಾ ಬಿಕ್ರೀದಾರನ ಹೆಸರು ಈ ಲೈಸೆನಿನ ಮೇಲಿಭಾಗದಲ್ಲಿ ಬರೆದಿರತಕ್ಕದ್ದು.

XII. ಮೇಲ್ಕಂಡ ಷರತ್ತುಗಳ ಪೈಕಿ ಯಾವದೆನ್ನಾದರೂ ತಪ್ಪಿ ನಡೆದರೆ ಲೈಸೆನ್ಸದಾರನು ಎಕ್ಸೈಜ್ ಕಾನೂನಿನಲ್ಲಿ ಆ ಅಪಕ್ಕನುಸರಿಸಿ ಮಾಡೋಣದ ನಿಬಂಧನೆಗಳಲ್ಲಿ ವಿಧಿಸಿರುವ ದಂಡನೆಗಳಿಗೆಲ್ಲ ಗುರಿಯಾಗುವದಲ್ಲದೆ, (1885ನೇ ಇಸವಿಯ ಮೈಸೂರ IIIನೇ ರೆಗ್ಯುಲೇಷನ್ ಯಂಬ) 1881ನೇ ಇಸವಿ XXIIನೇ ಆಕ್ಟಿನ 13ನೇ ಸೆಕ್ಷನ ಮೇರಿಗೆ ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತ ತೋರಿದಂತೆ ಲೈಸೆನ್ಸ ಸಹ ರದ್ದುಗಲಿಕ್ಕೆ ಗುರಿಯಾಗಿರತಕ್ಕದ್ದು.

XIII. ಈ ಲೈಸೆನ್ಸ 18 ನೇ ಇಸವಿ ಮಾರ್ಚ 31ರ ವರಿಗೆ ಜಾರೀಲಿರತಕ್ಕದ್ದು.

ಡಿಪ್ಟಿ)ಕ್ಟ
ಡೆಪ್ಯುಟಿ ಕಮ್ಮಿಷನರ ಆಫಿಸ್
ತಾರೀಖು ನೇ

ಡಿಪ್ಟಿ)ಕ್ಟ ಡೆಪ್ಯುಟಿ ಕಮ್ಮಿಷನರು.

ಈ ಕೆಳಗೆ ರುಜಾಮಾಡಿರುವಂಥಾ ಲ್ಲಿ ವಾಸವಾಗಿರುವ
ನ ಮಗನಾದ ಯಂಬು ನಾನು ಮೇಲ್ಕಂಡ ಲೈಸೆನ್ಸದಾರನಾಗಿಯೂ ನನಿಗಾಗಿ, ನನ್ನ ವಾರಸ್ದಾರ್‌ಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ, ಇದರ ದೆಕೆಯಿಂದ ಮೇಲ್ಕಂಡ ಲೈಸೆನಿನಲ್ಲಿ ವಿವರಿಸೋಣದ ಕರಾರುಗಳಿಗೂ ಆ ಷರತ್ತುಗಳಿಗೂ ಒಪ್ಪಿರುತ್ತೇನೆ.

ತಿಂಗಳ ನೇ ತಾರೀಖಿನಲ್ಲಿ ರವರ ಕಚೇರಿಯಲ್ಲಿ
ನಮ್ಮಿಗಳ ರೊಬರೂ ರುಜು ಮೊಹರಿನೊಡನೆ ವ್ಯೊಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು.

1 ———————
2 ———————
3 ———————

ಲೈಸೆನ್ಸದಾರ್

ಯಾರ ರೊಬರೂ ರುಜು ಮಾಡಲ್ಪಟ್ಟಿತೋ ಆ ಆಫಿಸರ ರುಜು.

ಬೆಂಗಳೂರು ಮತ್ತು ಮೈಸೂರು ಷಹರಗಳ ಮ್ಯುನಿಸಿಪಲ್ ರೆಗ್ಯುಲೇಷನಿನ 55ನೇ ಸೆಕ್ಷನ ಅನುಸರಿಸಿ ರಜಿಸ್ಟರ್ ಮಾಡಿದ ಬಗ್ಗೆ ಸರಟಿಫಿಕೇಟ್.

(ಇಲ್ಲಿ ಸರ್‌ಟಿಫಿಕೇಟಿನ ನಮೂನೆ ದಾಖಲ್ಮಾಡಲ್ಪಡತಕ್ಕದ್ದು)

ತಾರೀಖು ನೇ ———————

ಪ್ರೆಸಿಡೆಂಟ್ (ಅಥವಾ ವೈಸ್ ಪ್ರೆಸಿಡೆಂಟ್)
ಮ್ಯುನಿಸಿಪ್ಯಾಲಿಟಿ.

ಹೊಟೇಲ್‌ಗಳಲ್ಲಿ ಮತ್ತು ವೇತನಾನ್ನ ಶಾಲಾಗಳಲ್ಲಿ ಬರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಪರಾಯಿ ದೇಶದ ಉಕ್ಕಿದ ಸಾರಾಯಿ ಯಿವುಗಳನ್ನ ಮಾರುವ ಬಗ್ಯಾಗಿ ಕೊಡೋಣಾದ ಲೈಸೆನ್ಸ.

_____ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಾದ _____ ಯಂಬ ಹೆಸರುಳ್ಳ ನಾನು _____ ಹೊಟೇಲ್ ಯಂಬ ಹೆಸರುಳ್ಳ ಹೊಟೇಲನ್ನು ಯಿಟ್ಟುಕೊಂಡು _____ ಲ್ಲಿ ವಾಸವಾಗಿರುವ _____ ನ ಮಗನಾದ _____ ಯಂಬುವನಿಗೆ ಇದರಡಿ ಕಂಜ ಷರತ್ತುಗಳಿಗೂ ಮತ್ತು ಸಾಲೀನಾ _____ ರೂಪಾಯಿಗಳ ಲೈಸೆನ್ಸ ಫೀ ತೆರಲಿಕ್ಕೆ ಬದ್ಧನಾಗಿ _____ ಸ್ಥಳದಲ್ಲಿರುವ _____ ನೇ ನಂಬರುಳ್ಳ ಆವರಣದೊಳಗೆ ಪರಾಯಿದೇಶದ ಸ್ಪಿರಿಟ್ ಸಾರಾಯಿಯನ್ನೂ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನೂ ಚಿಲ್ಲರೆಯಾಗಿ ಮಾರಲಿಕ್ಕೆ ಅದರಿಂದ ಅಧಿಕಾರ ಕೊಟ್ಟಿರುತ್ತೇನೆ.

ಷರತ್ತುಗಳು.

I. ಈ ಲೈಸೆನ್ಸದಾರನು ತತ್ಕಾಲ ಜಾರೀಲಿರುವ ಎಕ್ಸೈಜ್ ಕಾನೂನಿಗೂ ಮತ್ತು (1885ನೇ ಇಸವಿಯ III‌ನೇ ಮೈಸೂರ ರೆಗ್ಯುಲೇಷನ್) 1881ನೇ ಇಸವಿ XXII‌ನೇ ಎಕ್ಸೈಜ್ ಆಕ್ಟಿನ 55ನೇ ಸೆಕಷನನ್ನನುಸರಿಸಿ ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಯೇರ್ಪಡಿಸೋಣಾದ ಯಲ್ಲ ನಿಬಂಧನೆಗಳ ವೇರಿಗೆ ನಡೆದುಕೊಳ್ಳಲಿಕ್ಕೂ ಬದ್ಧನಾಗಿರತಕ್ಕದ್ದು.

II. (a) ಇದಕ್ಕೆ ಲಗ್ಗತ್ ಇರುವ ಪಟ್ಟಿಯಲ್ಲಿ ವಿವರಿಸೋಣಾವ ಗುರ್ತುಗಳುಳ್ಳ (ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನಾಗಲಿ, ಅಥವಾ ಪರಾಯಿ ದೇಶದ ಉಕ್ಕಿದ ಸಾರಾಯಿ, ಸಂಗತ್ಯಾನುಸಾರ) ಯಾವ ಸಾರಾಯಿಯನ್ನಾಗಲಿ ಮಾರಲಿಕ್ಕೆ ಈ ಲೈಸೆನ್ಸ ಕೊಡಲ್ಪಟ್ಟಿರುತ್ತೆ. ಡೆಪ್ಯುಟಿ ಕಮ್ಮಿಷನರು ತಾವಾಗಿಯೇ ಆಗಲಿ ಅಥವಾ ಲೈಸೆನ್ಸದಾರನು ಅರ್ಜೀ ಕೊಟ್ಟ ಮೇಲಾಗಲಿ, ಅಂಥಾ ಪಟ್ಟಿಗೆ ಹೊಸದಾಗಿ ಸೇರಿಸುವದಕ್ಕೂ ಯಾ ಬದಲಾಯಿಸುವ ದಕ್ಕೂ ಸ್ವತಂತ್ರವುಳ್ಳವರಾಗಿರುವರು. ಪಟ್ಟಿಯೊಳಗಣ ಪ್ರತಿ ಬದಲಾವಣೆಗೂ ಡೆಪ್ಯುಟಿ ಕಮ್ಮಿಷನರವರು ರುಜು ಮಾಡತಕ್ಕದ್ದು.

(b) ಸದರೀ ಪಟ್ಟಿಯಲ್ಲಿ ಬದಲಾವಣೆಯೊಂದಿಗೆ ಇರುವ ಗುರ್ತುಗಳ ವೈಕಿ ಯಾವದಾದರೊಂದು ಗುರ್ತಿಲ್ಲದ ಯಾವ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನಾಗಲಿ ಈ ಲೈಸೆನ್ಸಿನ ದೆಶೆಯಿಂದ ಮಾರಲ್ಪಡತಕ್ಕದ್ದಲ್ಲವು.

(ಯಾವಗುರ್ತುಳ್ಳ ಸಾರಾಯಿಯ ಬಿಕರೀಬಗ್ಯೆ ಈ ಲೈಸೆನ್ಸ ಕೊಡಲ್ಪಟ್ಟಿರುತ್ತೊ ಆ ಬಾಬತು ಪಟ್ಟಿಯನ್ನು ಯಿಲ್ಲಿ ದಾಖಲ್ಮಾಡತಕ್ಕದ್ದು.)

III. ಮೇಲೆ ಹೇಳಲ್ಪಟ್ಟ ಹೊಟೇಲ್ ಆವರಣಗಳಿಂದ ಹೊರಗೆ ಪರಾಯಿ ದೇಶದ ಯಾವ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನಾಗಲಿ ಸಾಗಿಸಲ್ಪಡಲೀಸಕೂಡದು ಮತ್ತು ಈ ಲೈಸೆನ್ಸ ಅನುಸರಿಸಿ ಮಾರಲ್ಪಡುವ ಪರಾಯಿ ದೇಶದ ಯಲ್ಲ ಸ್ಪಿರಿಟ್ ಸಾರಾಯಿ ಅಥವಾ ಉಕ್ಕಿದ ಸಾರಾಯಿಯನ್ನ ಆವರಣದೊಳಗೇನೇ ಕುಡಿಯತಕ್ಕದ್ದು. VII‌ನೇ ಕಲಮಿನ ಪ್ರತಿಸ ವೇರಿಗೆ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಶದ ಉಕ್ಕಿದ ಸಾರಾಯಿ ಇವುಗಳನ್ನ ಹೊಟೇಲ್ ಆವರಣದಿಂದ ಸಾಗಿಸುವ ವಿಷಯದಲ್ಲಿ ಈ ಷರತ್ತು ಲಗಾವಾಗತಕ್ಕದ್ದಲ್ಲವು.

IV. (i) ಯಾವ ಬಗೆಯಾದ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನ ಎಷ್ಟು ಮಟ್ಟುಗಾಗಲಿ ಕಮೋಡಿಂಗ್ ಆಫಿಸರರ ಯಾ ಆ ಬಗ್ಯೆ ಆಂಥಾ ಆಫಿಸರಿಂದ ಕ್ರಮವಾಗಿ ಅಧಿಕಾರ ಪೊಂದಿದ ಯಾವನಾದರೊಬ್ಬ ಮನುಷ್ಯನೆ ಬರಹ ಮೂಲಕವಾದಅಪ್ಪಣೆ ಶಿವಾಯಿ ಯಾವ ಯೂರೋಪಿಯರ್ಯ ನ್ಯಾಕಮ್ಮಿಷನೆಡ್ ಆಫಿಸರ್ ಯಾ ಪ್ರೈವೇಟ್ ಸೋಲ್ಜರಿಗಾಗಲಿ ಯಾ ಸದರೀ ಜನಗಳಿಗೆ ಸಂಬಂಧಪಟ್ಟ ಯಾ ಕೀರಿದ ಯಾವ ಯೂರೋಪಿಯರ್ಯ ಯಾ ಈಸ್ಟ್ ಇಂಡಿಯರ್ಯ ಹೆಂಗಸರಿಗಾಗಲಿ ಮಾರಲೂಕೂಡದು, ಕೊಡಲೂ ಕೂಡದು, ಮತ್ತು ಅಂತಾ ಬರಹಮೂಲಕವಾದ ಅಪ್ಪಣೆಯನ್ನ, ಲೈಸೆನ್ಸದಾರನು ಹಾಗೆ ಮಾರಾಟ ಮಾಡಿದ್ದಕ್ಕಾಗಿ ದನ್ಲೈವಜ್ ತರೀಕ್ ತನ್ನಬಳಿ ಇಟ್ಟುಕೊಂಡಿದ್ದು ಯಾವ ಎಕ್ಸೈಜ್ ಆಫಿಸರಾಗಲಿ ಕೇಳಿದಾಗ ಹಾಜರ್ಮಾಡತಕ್ಕದ್ದು.

(ii.) ಮೇಲೆ ಹೇಳೋಣಾದ ಹೊಟೆಲ್‌ನಲ್ಲಿ ನಡೆಯುವ ಮಾರಾಟವು ಆ ಹೊಟೆಲ್‌ನಲ್ಲಿ ಬಂದು ಯಿರುವ ಜನಗಳ ಸ್ವಂತ ಉಪಯೋಗಕ್ಕಾಗಿಯಾಗಲಿ ಅಥವಾ ಅವರಿಂದ ಕರೆಸಿಕೊಳ್ಳಲ್ಪಡುವ ಜನಗಳ ಸ್ವಂತ ವೈಪಯೋಗಕ್ಕಾಗಲಿ ಮಾತ್ರವೇ ನಡೆಯತಕ್ಕದ್ದು.

V. (a) ಲೈಸೆನ್ಸದಾರನು ಮೇಲೆ ಹೇಳಲ್ಪಟ್ಟ ಸಾರಾಯಿ ಯಾ ಉಕ್ಕಿದ ಸಾರಾಯಿ ಯೊಂದಿಗೆ ನೀರನ್ನು ಸೇರಿಸಕೂಡದು ಯಾ ಬೆರಕೆ ಮಾಡಕೂಡದು; ಮತ್ತು ನೀರು ಸೇರಿರುವಂಥಾ ಯಾ ಬೆರಕೆಯಾಗಿರುವಂಥಾ ಸಾರಾಯಿಯಂದು ತಿಳಿದು ಮಾರಲೂ ಕೂಡದು.

(b) ಮೇಲೆ ಹೇಳಲ್ಪಟ್ಟ ಹೊಟೇಲ್ ಯಾ ಆವರಣದಲ್ಲಿ ಮತ್ತೇರಿ ಬೀಳುವಂತೆ ಅಥವಾ ಅಕ್ರಮವಾದ ನಡತೆ ನಡೆಯಲೀಸ ಕೊಡದು.

(c) ಆ ಸ್ಥಳದಲ್ಲಿ ಯಾವ ವಿಧವಾದ ಜಾಜನ್ನಾಗಲಿ ಆಹುವಂತೆ ಮನಃಪೂರ್ತಿಯಾಗಿ ಅಸ್ಪದ ಕೊಡಕೂಡದು.

(d) ವ್ಯಭಿಚಾರಿಗಳನ್ನಾಗಲಿ, ಪ್ರಸಿದ್ಧವಾದ ದುರ್ನಡತೆಯುಳ್ಳ ಜನಗಳನ್ನಾಗಲಿ, ತನಿಗೆ ತಿಳಿದು ಬರುವಂತೆಯಾದರೂ ಆ ಆ ಸ್ಥಳದಲ್ಲಿ ಇರುವಂತೆಯಾದರೂ ಮಾಡಕೂಡದು.

(e) ಮತ್ತು ಫರಾರಿಯಾಗಿಬಂದ ಯಾವ ಯೂರೋಪಿಯರ್ಯ ಸೋಲ್ಜರಿಗಾದರೂ ಮನಃಪೂರ್ತಿಯಾಗಿ ಆಸರೆ ಕೊಡಕೂಡದು ಯಾ ಅಂಥಾವನ್ನ ಆಲ್ಲಿ ಬೈಟಿಡಲೂಕೂಡದು.

VI. ಅಸಿಸ್ಟೆಂಟ್ ಕಮ್ಮಿಷನರ ದರ್ಜೆಗೆ ಕಮ್ಮಿಯಿಲ್ಲದ ಯಾವ ಆಫಿಸರೇಆಗಲಿ ಅಥವಾ ಅಂಥಾ ಆಫಿಸರಿಂದ ಅಧಿಕಾರ ಹೊಂದಿದಂತಾ ಯಾವ ಯಕ್ಸೈಜ್ ಆಫಿಸರೇಆಗಲಿ ಕೇಳಿದಾಗ ಲೈಸೆನ್ಸದಾರನು, ಬಿಕರೀ ಬಗ್ಯೆ ಕೊಡೋಣಾದ ಈ ಲೈಸೆನ್ಸ್ ಅನುಸರಿಸಿ ತರಿಸಿದಂತಾ ಪರಾಯಿದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿ ಇವುಗಳ ಅಸಲ್ ಇನ್ವಾಯಿಸ್ ಲಿಖ್ತವನ್ನ ಹಾಜರ್ಮಾಡಲಿಕ್ಕೆ ಬದ್ಧನಾಗಿರತಕ್ಕದ್ದು.

VII. ಈ ಲೈಸೆನ್ಸದಾರನು ತನ್ನ ಕೆಲಸವನ್ನು ನಿಲ್ಲಿಸಬಿಡಬೇಕಾದಾಗ _____ ರೂಲ್ಸ್ ಅನುಸರಿಸಿ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನ ಮಾರಲಿಕ್ಕಾಗಿ ಲೈಸೆನ್ಸ್ ಪಡೆದಂಥಾ ಯಿತರ ಲೈಸೆನ್ಸದಾರನಿಗೆ ಸದರೀ ಸಾರಾಯಿಯನ್ನ ಮಾರಲೂಬಹುದು, ಅಥವಾ ವರ್ಗ ಮಾಡಲೂಬಹುದು ; ಹಾಗೆ ಮಾರಬೇಕಾದರೆಯಾಗಲಿ ಯಾ ವರ್ಗವಾಡಬೇಕಾದರೆಆಗಲಿ ಡೆಪ್ಯುಟಿ ಕಮ್ಮಿಷನರವರ ಯಕ್ಸೈಜ್ ಇಲಾಖೆಯಿಂದ ರಜಾಪೊಹರನ್ನಿ ಡ್ಯೂಪ್ಲಿಕೇಟ್ ರಹದಾರಿಯನ್ನ ಮುಂಚಿತವಾಗಿ ಪಡೆಯದೇ ಮಾರಲೂ ಕೂಡದು, ವರ್ಗ ಮಾಡಲೂ ಕೂಡದು. ಖರೀದಿ ಮೂಲಕ ಯಾ ವರ್ಗಮೂಲಕ ಪಡೆದುಕೊಂಡ ಲೈಸೆನ್ಸದಾರನು ಹಾಗೆ ಪಡಕೊಂಡದ್ದಕ್ಕಾಗಿ ಸದರೀ ರಹದಾರಿಯ ಯರಡನೇ ಪ್ರತಿಯನ್ನ ದಸ್ತೈವಜಾಗಿ ತನ್ನಬಳಿಯಿಟ್ಟುಕೊಂಡಿದ್ದು ಎಕ್ಸೈಜ್ ಆಫಿಸರು ತನಿಖೆ ಬಗ್ಯೆ ಯಾವಾಗಲಾದರೂ ಕೇಳಿದಾಗ ಅದನ್ನು ತೋರಿಸತಕ್ಕದ್ದು. ಖರೀದಿಮಾಡಿದವನು ವ ಖರೀದಿ ಗೆತೆಗದುಕೊಂಡವನು ಈ ಉಭಯತ್ರರೂ ಅಸಲ್ ರಹದಾರಿಗೆ ತಾರೀಖು ನಮೂದಿಸಿ ರುಜುಮಾಡಿ ಡೆಪ್ಯುಟಿ ಕಮ್ಮಿಷನರ ಯಕ್ಸೈಜ್ ಆಫಿಸಿಗೆ ವಾಪಸು ಕಳುಹಿಸತಕ್ಕದ್ದು.

VIII. ಲೈಸೆನ್ಸದಾರನು ಯಿಡುವ ಲಿಖ್ತದಲ್ಲಿ ತಿಂಗಳು, ತಾರೀಖು, ಪರಾಯಿದೇಶದ ಸ್ಪಿರಿಟ್ ವ ಉಕ್ಕಿದ ಸಾರಾಯಿಗಳ ಕೇದಾದು, ಮತ್ತು ತರಹೆಗಳು ಯಾವ ಮೂಲಕವಾಗಿ ಪಡದುಕೊಂಡಪ್ಪದ್ದು, ಬಿಕರಿ ಆದ ತೇದಾದು ವ ಅದರ ಮೊಬಲಗು ಮತ್ತು ರೋಜೇನಾ ಹಾಜರಿ ಸರಕು ಯಿವುಗಳ ಸಂಖ್ಯಾ ವ ಕರಾರ್‌ವಾಕಾ ತಪಶೀಲ್ ನಮೂದಿರತಕ್ಕದ್ದು. ಈ ಲಿಖ್ತಗಳು ಯಾವ ಕಾಲದಲ್ಲಾಗಲಿ ಎಕ್ಸೈಜ್ ಆಫಿಸರುಗಳ ತನಖಿಗೆ ಒಳಪಟ್ಟಿರತಕ್ಕದ್ದು. ಈ ಲಿಖ್ತದ ಕೋಪ್ಯಾರೆಯನ್ನ ಕನಪೀಯಿಂದ ಡೆಪ್ಯುಟಿ ಕಮ್ಮಿಷನರವರ ಆಫಿಸಿನ ಎಕ್ಸೈಜ್ ಇಲಾಖೆಗೆ ರವಾನಿಸತಕ್ಕ ಬಗ್ಯಾಗಿ ನೊಕರರಾಗಿರುವ ಎಕ್ಸೈಜ್ ಆಫಿಸರ ಬಳಿಗೆ ತಿಂಗಳಿಗೊಂದಾವರ್ತಿ ಯರಡು ಪ್ರತಿಗಳು ರವಾನಿಸಲ್ಪಡತಕ್ಕದ್ದು.

IX. ಈ ಲೈಸೆನ್ಸು, ಡೆಪ್ಯುಟಿ ಕಮ್ಮಿಷನರವರ ಖರಹ ಮೂಲಕವಾದ ಅಪ್ಪಣೇ ವಿನಾ ಕ್ರಯ, ದಾನ, ಭೋಗ್ಯ ಯಾ ಮತ್ಯಾವ ರೀತಿಯಿಂದಲೂ ಪರಭಾರೆಯಾಗತಕ್ಕದ್ದಲ್ಲವು.

X. ಮೇಲ್ಕಂಡ ಷರತ್ತುಗಳ ವೈಕಿ ಯಾವದನ್ನಾದರೂ ತಪ್ಪಿನಡೆದರೆ ಲೈಸೆನ್ಸದಾರನು, ಎಕ್ಸೈಜ್ ಕಾನೂನಿನಲ್ಲಿ ವ ಅದಕ್ಕನುಸರಿಸಿ ಮಾಡೋಣಾದ ನಿಬಂಧನೆಗಳಲ್ಲಿ ವಿಧಿಸುವ ದಂಡನೆಗಳಿಗೆಲ್ಲ ಗುರಿಯಾಗುವದಲ್ಲದೆ, (1885ನೇ ಇಸವಿಯ ಮೈಸೂರ IIIನೇ ರೆಗ್ಯುಲೇಷನ್) ಎಂಬ 1881ನೇ ಇಸವಿ XXIIನೇ ಆಕ್ಟಿನ 13ನೇ ಸೆಕ್ಷನ್ ಮೇರಿಗೆ ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತತೋರಿದಂತೆ ಲೈಸೆನ್ಸ್ ಸಹ ರದ್ದಾಗಲಿಕ್ಕೆ ಗುರಿಯಾಗಿರತಕ್ಕದ್ದು.

XI. ಈ ಲೈಸೆನ್ಸ್ 18 ನೇ ಇಸವಿ ಮಾರ್ಚ್ 31ರ ವರಿವಿಗೆ ಜಾರೀಲಿರತಕ್ಕದ್ದು.

_____ ಡೆಪ್ಯುಟಿ ಕಮ್ಮಿಷನರ ಆಫಿಸ್ ತಾರೀಖು ನೇ ಸಿಸ್ಟ್ಯಕ್ಟ್ಪ

_____ ಡಿ|| ಡೆಪ್ಯುಟಿ ಕಮ್ಮಿಷನರ.

ಈ ಕೆಳಗೆ ರುಜು ಮಾಡಿರುವಂಥಾ _____ ಲ್ಲಿ ವಾಸವಾಗಿರುವ _____

ನ ಮಗನಾದ _____ ಯಂಬ ನಾನು ಮೇಲ್ಕಂಡ ಲೈಸೆನ್ಸದಾರನಾಗಿ ನನಿಗಾಗಿಯೂ ನನ್ನ ವಾರಸದಾರ

ೋಸ್ಕರವೂ ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ, ಮತ್ತು ವರ್ಗ ಪಡೆದಂಥಾವರಿಗೋಸ್ಕರವೂ, ಇದರದಕೆಯಿಂದ ಮೇಲ್ಕಂಡ ಸೆಕ್ಷನ್ನಲ್ಲಿ ವಿವರಿಸೋಣಾದ ಕರಾರುಗಳಿಗೂ ವ ಷರತ್ತುಗಳಿಗೂ ಒಪ್ಪಿರುತ್ತೇನೆ.

_____ ತಿಂಗಳ _____ನೇ ತಾರೀಖಿನಲ್ಲಿ _____ ರವರ ಕಚೇರಿಯಲ್ಲಿ ನಮ್ಮಗಳ ರೂಬರೂ ರುಜಾ ಮೊಹರಿನೊಡನೆ ಒಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು

1 _____
2 _____
3 _____

_____
ಲೈಸೆನ್ಸದಾರ

ಯಾರ ರೂಬರೂ ರುಜು ಮಾಡಲ್ಪಟ್ಟಿತೋ ಆ ಆಫಿಸರ ರುಜು.

ಬೆಂಗಳೂರು ವ ಮೈಸೂರು ಷಹರ್‌ಗಳ ಮ್ಯುನಿಸಿಪಲ್ ರೆಗ್ಯುಲೇಷನಿನ 58ನೇ ಸೆಕ್ಷನ್ ಅನುಸರಿಸಿ ರಜಿಸ್ಟರ್ ಮಾಡಿದ ಬಗ್ಗೆ ಸರ್ಟಿಫಿಕೇಟ್.

ತಾರೀಖು _____ನೇ _____

ಪ್ರೆಸಿಡೆಂಟ್ (ಅಥವಾ ವೈಸ್ ಪ್ರೆಸಿಡೆಂಟ್)
ಮ್ಯುನಿಸಿಪಾಲಿಟಿ.

ರಿಫ್ರೆಷ್‌ಮೆಂಟ್ ರೂಮ್ಸ್ ಅಂಡಿಗಳಲ್ಲಿ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನ ಮಾರತಕ್ಕ ಬಗ್ಗೆ ಲೈಸೆನ್ಸ್.

ಲೈಸೆನ್ಸಿನ ರಿಜಿಸ್ಟರ್ ನಂಬರು _____

ಲೈಸೆನ್ಸದಾರನ ಹೆಸರು _____

ದುಕಾನ್‌ದಾರನ ಹೆಸರು _____

ದುಕಾನ್ ಇರುವ ಸ್ಥಳ { ಕಸಬಾ ಜಾಗಾ _____ ; ಬೀದಿ _____ ; ಅಂಗಡಿ ನಂಬರು _____ }

_____ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಾದ _____ ಹೆಸರುಳ್ಳ ನಾನು _____ ಲ್ಲಿ ವಾಸವಾಗಿರುವ _____ ಯಂಬವನ ಮಗನಾದ _____ ಎಂಬವನಿಗೆ ಈ ಕೆಳಗೆ ನಮೂದಾಗುವ ಷರತ್ತುಗಳನ್ನನುಸರಿಸಿ ಮತ್ತು ಸಾಲಿಯಾನಾ _____ ರೂಪಾಯಿಗಳ ಲೈಸೆನ್ಸ್ ಫೀಯನ್ನ ತೆರಲಿಕ್ಕೆ ಗುರಿಯಾಗಿ, ಮೇಲ್ಕಂಡ ಆವರಣದಲ್ಲಿ ಪರಾಯಿದೇಶದ ಸ್ಪಿರಿಟ್ ಸಾರಾಯಿಯನ್ನೂ ಮತ್ತು ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನೂ ಚಿಲ್ಲರೆಯಾಗಿ ಮಾರಲಿಕ್ಕೆ ಯಿದರಿಂದ ಅಧಿಕಾರ ಕೊಟ್ಟಿರುತ್ತೇನೆ.

ಷರತ್ತುಗಳು.

I. ಈ ಲೈಸೆನ್ಸದಾರನು, ತತ್ಕಾಲ ಜಾರೀಲಿರುವ ಎಕ್ಸೈಜ್ ಕಾನೂನಿಗೂ ಮತ್ತು (1885ನೇ ಇಸವಿಯ ಮೈಸೂರು IIIನೇ ರೆಗ್ಯುಲೇಷನ್) 1881ನೇ ಇಸವಿ XXIIನೇ ಯಕ್ಸೈಜ್ ಆಕ್ಟಿನ 55ನೇ ಸೆಕ್ಷನ್ನನ್ನನುಸರಿಸಿ ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಯೇರ್ಪಡಿಸೋಣಾದ ಯಲ್ಲ ನಿಬಂಧನೆಗಳ ಮೇರಿಗೆ ನಡೆದುಕೊಳ್ಳಲಿಕ್ಕೆ ಬದ್ಧನಾಗಿರತಕ್ಕದ್ದು.

II. (a) ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ವಿವರಿಸೋಣಾದ ಗುರ್ತುಗಳುಳ್ಳ (ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿದೇಶದ ಸ್ಪಿರಿಟ್ ಸಾರಾಯಿ ಪ ಪರಾಯಿದೇಶದ ಉಕ್ಕಿದ ಸಾರಾಯಿಯನ್ನಾಗಲಿ ಆಥವಾ ಪರಾಯಿದೇಶದ ಉಕ್ಕಿದ ಸಾರಾಯಿ ಸಂಗತ್ಯಾನುಸಾರ) ಯಾವ ಸಾರಾಯಿಯನ್ನಾಗಲಿ ಮಾರಲಿಕ್ಕೆ ಈ ಲೈಸೆನ್ಸ್ ಕೊಡಲ್ಪಟ್ಟಿರುತ್ತೆ. ಡೆಪ್ಯುಟಿ ಕಮ್ಮಿಷನರು ತಾವಾಗಿಯೇ ಆಗಲಿ ಆಥವಾ ಲೈಸೆನ್ಸದಾರನು ಅರ್ಜೀಕೊಟ್ಟ ಮೇಲಾಗಲಿ, ಅಂಥಾ ಪಟ್ಟಿಗೆ ಹೊಸದಾಗಿ ಕೇರಿಸುವದಕ್ಕೂ ಯಾ ಮತ್ತೊಂದು ರೀತಿಯಿಂದಲಾದರೂ ಬದಲಾಯಿಸುವದಕ್ಕೂ ಸ್ವತಂತ್ರವುಳ್ಳವರಾಗಿದ್ದಾರೆ. ಪಟ್ಟಿಯೊಳಗಣ ಪ್ರತಿ ಬದಲಾವಣೆಗೂ ಡೆಪ್ಯುಟಿ ಕಮ್ಮಿಷನರವರು ರುಜು ಮಾಡತಕ್ಕದ್ದು.

(b) ಸದರೀ ಪಟ್ಟಿಯಲ್ಲಿ ಬದಲಾವಣೆಯೊಂದಿಗೆ ನಮೂದಿರುವ ಗುರ್ತುಗಳ ಪೈಕಿ ಯಾವದಾದರೊಂದು ಗುರ್ತಿಲ್ಲದ ಯಾ ಯಿದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ತಿದ ಸಾರಾಯಿಯನ್ನಾಗಲಿ ಈ ಲೈಸೆನಿನ ದೆಯಿಂದ ಮಾರಲ್ಪಡತಕ್ಕದ್ದಲ್ಲವು.

(ಯಾವ ಗುರ್ತುಳ್ಳ ಸಾರಾಯಿಯನ್ನು ಮಾರುವ ಬಗ್ಯೆ ಈ ಲೈಸೆನ್ಸು ಕೊಡಲ್ಪಟ್ಟಿರುತ್ತೋ ಆ ಬಾಬತು ಪಟ್ಟಿಯನ್ನು ದಾಖಲ್ಮಾಡಬೇಕು).

III. ಮೇಲ್ಕಂಡ ದುಕಾನಿನಲ್ಲಿ ಮಾರಲ್ಪಡುವ ತಮಾಂ ಪರಾಯಿದೇಶದ ಸ್ಪಿರಿಟ್ ಯಾ ಉಕ್ತಿದ ಸಾರಾಯಿಯೂ, ಆವರಣದೊಳಗೇನೆ ಕುಡಿಯಲ್ಪಡಬೇಕೇ ಹೊರ್ತು XIನೇ ಷರತ್ತಿನಲ್ಲಿ ಕಂಡಂತೆ ವಿನಾ ಯಾವ ನೆಪದಿಂದಲಾಗಲಿ ದುಕಾನಿನಿಂದ ಹೊರಗೆ ವಯ್ಯಲ್ಪಡಕೂಡದು, ಪರಾಯಿದೇಶದ ಸ್ಪಿರಿಟ್ ಸಾರಾಯಿಯನ್ನು ಯಾವ ಒಬ್ಬಮನುಷ್ಯನಿಗಾಗಲಿ ವೊಂದು ದಫೆಗೆ ಯರಡುದ್ರಾಂ ವರಿವಿಗೇನೇ ಕೊಡಲ್ಪಡತಕ್ಕದ್ದು.

IV. (1) ಯಾವ ಬಗೆಯಾದ ಪರಾಯಿದೇಶದ ಸ್ಪಿರಿಟ್ ಯಾ ಉಕ್ತಿದ ಸಾರಾಯಿಯನ್ನು ಯಷ್ಟುಮಟ್ಟಿಗಾಗಲಿ ಕವರ್ನ್ಮೆಂಟಿಂಗ್ ಆಫಿಸರರ ಯಾ ಆ ಬಗ್ಯೆ ಅಂಥಾ ಆಫಿಸರಿಂದ ಕ್ರಮವಾಗಿ ಅಧಿಕಾರ ಹೊಂದಿದ ಯಾವ ಮನುಷ್ಯನ ಖರಹ ಮೂಲಕವಾದ ಅಪ್ಪಣೆ ವಿನಾ ಯಿ ಯಾವ ಯೂರೋಪಿಯರ್ ನಾರ್ಕಮ್ಮಿಷನೆಡ್ ಯಾ ಪ್ರೈವೆಟ್ ಸೋಲ್ಜರಿಗಾಗಲಿ ಯಾ ಸದರೀ ಜನಗಳಿಗೆ ಸಂಬಂಧಪಟ್ಟ ಯಾ ಕೀರಿದ ಯಾವ ಯೂರೋಪಿಯರ್ ಯಾ ಈಸ್ಟ್ ಇಂಡಿಯರ್ ಹೆಂಗಸರಿಗಾಗಲಿ ಮಾರಲೂ ಕೂಡದು ಕೊಡಲೂಕೂಡದು, ಮತ್ತು ಅಂಥಾ ಖರಹ ಮೂಲಕವಾದ ಅಪ್ಪಣೆಯನ್ನು ಲೈಸೆನ್ಸುದಾರನು ಹಾಗೆ ಮಾರಾಟ ಮಾಡಿದ್ದಕ್ಕಾಗಿ ದಸ್ತಾವೇಜ್ ತರೀಕ್ ತನ್ನಬಳಿ ಯಿಟ್ಟುಕೊಂಡಿದ್ದು ಯಾವ ಎಕ್ಸೈಜ್ ಆಫಿಸರಾಗಲಿ ಕೇಳಿದಾಗ ಹಾಜರ್ಮಾಡತಕ್ಕದ್ದು.

(2) ಹದಿನಾರು ವರುಷಕ್ಕೆ ಕಮ್ಮಿಯಾದ ವಯಸ್ಸುಳ್ಳ ಯಾವ ಹುಡುಗನಿಗಾಗಲಿ ಯಾವ ಶಿಪಾಯಿಗಾಗಲಿ, ಪೊಲೀಸ್ ಕಿಬ್ಬಂದಿಗೆ ಕೀರಿದ ಯಾವ ಮನುಷ್ಯನಿಗೆ ಆಗಲಿ, ಯಾ ನೌಕರಿ ಮೇಲಿರುವ ರೈಲ್ವೆ ಕಂಪೆನಿಯ ನೌಕರನಿಗಾಗಲಿ, ಯಾವ ಬಗೆಯ ಪರಾಯಿದೇಶದ ಯಾ ಉಕ್ತಿದ ಸಾರಾಯಿಯನ್ನು ಎಷ್ಟುಮಟ್ಟಿಗೂ ಕೊಡಲೂ ಕೂಡದು, ಯಾ ಮಾರಲೂ ಕೂಡದು.

V. ಈ ಲೈಸೆನ್ಸ್ ಅನುಸರಿಸಿ ಪರಾಯಿದೇಶದ ಸ್ಪಿರಿಟ್ ವ ಉಕ್ತಿದ ಸಾರಾಯಿಯನ್ನು ಬಿಕರೀ ಮಾಡುವ ಸ್ಥಳವು ಬಹಿರಂಗವಾದ ದುಕಾನಾಗಿ ಯಿರತಕ್ಕದ್ದಲ್ಲದೆ ಬಾಗಲುಬಳಿ ಯಾ ಕಿಟಕಿಯಲ್ಲಿ ನಿಂತು ನೋಡುವಂತಾವನಿಗೆ ಒಳಗೆ ಯಿರತಕ್ಕವರೆಲ್ಲರೂ ಕಾಣಬರುವಂತೆ ಕಟ್ಟಲ್ಪಟ್ಟಿರತಕ್ಕದ್ದು, ಮತ್ತು ದುಕಾನಿನೊಳಗಿಂದ ಯಿನ್ನೊಂದು ಕೊಠಡಿಗಾಗಲಿ, ಅಂಗಳಕ್ಕಾಗಲಿ ಯಾ ಪಾಳಿಯುಳ್ಳ ವಠಾರಕ್ಕಾಗಲಿ ಹೋಗುವದಕ್ಕೆ ಅಸ್ಪದವಿರಕೂಡದು.

VI. ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಬಂದು ಹಲಿಗೆಹಾಕಿ ಅದರ ಮೇಲೆ ದುಕಾನಿನ ನಂಬರು, ಲೈಸೆನ್ಸುದಾರನ ಹೆಸರು ವ ಅಂಗಡಿಯವನ ಹೆಸರು, ಇವುಗಳು ವಿರಳವಾಗಿ ಬರೆಯಲ್ಪಟ್ಟಿರತಕ್ಕದ್ದು ಮತ್ತು ಮಾರಲ್ಪಡುವ ಪರಾಯಿಗಳ ತಪಶೀಲ್‌ವಾರ ನಿರಖ್‌ಪಟ್ಟಿಯನ್ನು ಅಂಗಡಿಯೊಳಗೆ ಬಹಿರಂಗವಾಗಿ ತಗಲುಹಾಕಿರತಕ್ಕದ್ದು.

VII—(a) ಲೈಸೆನ್ಸುದಾರನು ಮೇಲೆ ಹೇಳಲ್ಪಟ್ಟ ಸ್ಪಿರಿಟ್ ಸಾರಾಯಿ ಯಾ ಉಕ್ತಿದ ಸಾರಾಯಿ ಯೊಂದಿಗೆ ಪೋಸಕರವಾಗಿ ನೀರು ಬೆರಸಕೂಡದು ಯಾ ಬೆರಕೆ ಮಾಡಕೂಡದು ಮತ್ತು ಪೋಸಕರವಾಗಿ ನೀರು ಕೀರಿರುವಂಥಾ ಯಾ ಬೆರಕೆಯಾಗಿರುವಂಥಾ ಸಾರಾ ಸಾರಾಯಿ ಯೆಂದು ತಿಳಿದು ಮಾರಲೂಕೂಡದು.

(b) ಮೇಲೆ ಹೇಳಲ್ಪಟ್ಟ ರಿಫ್ರೆಷ್‌ಮೆಂಟ್ ರೂಂ ಅಂಗಡಿಯಲ್ಲಿ ಯಾ ಆ ಆವರಣದೊಳಗೆ ಮತ್ತೇರಿಬೀಳುವಂತೆ ಅಥವಾ ಅಕ್ರಮವಾದ ನಡತೆ ನಡಿಯಲೀಸಕೂಡದು.

(c) ಅವುಗಳಲ್ಲಿ ಯಾವವಿಧವಾದ ಜೂಜನ್ನಾಗಲಿ ಆಡುವಂತೆ ಮನಃಪೂರ್ತಿಯಾಗಿ ಅಸ್ಪದಕೊಡಕೂಡದು.

(d) ವ್ಯಭಿಚಾರಿಯನ್ನಾಗಲಿ ಪ್ರಸಿದ್ಧವಾದ ದುರ್ನಡತೆಯುಳ್ಳ ಜನಗಳನ್ನಾಗಲಿ ತನಿಗೆ ತಿಳಿದು ಖರುವಂತೆಯಾದರೂ ಅಥವಾ ಅಂಗಡಿಯಲ್ಲಿ ಇರುವಂತೆಯಾದರು ಮಾಡಕೂಡದು.

(e) ಮತ್ತು ಫರಾರಿಯಾಗಿ ಏಂದೆ ಯಾವ ಯೂರೋಪಿಯರ್ ಸೋಲ್ಜರಿಗಾದರೂ ಮನಃಪೂರ್ತಿಯಾಗಿ ಆಸರೆಕೊಡಕೂಡದು, ಅಥವಾ ಆಂತಾವನ್ನು ಅಲ್ಲಿ ಕೃಚಿಪಡಲೂಕೂಡದು.

VIII. ಈ ಲೈಸೆನ್ಸು ಮೇರಿಗೆ ಬಿಕರೀ ಮಾಡಲ್ಪಡುವ ಪರೋಬಸ್ತು ಪರಾಯಿದೇಶದ ಸಾರಾಯಿ ಯಾ ಉಕ್ತಿದ ಸಾರಾಯಿಯ ಖರೀದಿಗಾಗಿ ನಗದು ಹಣ ತೆಗದುಕೊಳ್ಳತಕ್ಕದ್ದೇ ಹೊರ್ತು ಸಾಲವಾಗಿ ಕೊಡಕೂಡದು ಅಥವಾ ಸಾರಾಯಿಗಾಗಿ ಯಾವ ವಸ್ತುವನ್ನಾಗಲಿ ಅಡವಾನವಾಗಿಯಾಗಲಿ ಯಾ ಬದಲಿಯಾಗಿಯಾಗಲಿ ಇಟ್ಟುಕೊಳ್ಳಕೂಡದು.

IX. ಅಂಗಡಿಯನ್ನು ಪ್ರತಿದಿನವೂ ರಾತ್ರಿ 9 ಘಂಟೆಗೆ ಮುಚ್ಚಜೇಕು ಮತ್ತು ಪ್ರಾತಃಕಾಲ 6 ಘಂಟೆಗೆ ಮುಂಚಿತವಾಗಿ ತೆರೆಯಕೂಡದು. ಅಂಗಡಿಯು ಪ್ರಾತಃಕಾಲ 8 ಘಂಟೆ ಲಾಗಾಯತು ರಾತ್ರಿ 9 ಘಂಟೆವರೆವಿಗೂ ತೆರೆದಿರತಕ್ಕದ್ದು.

X. ಅಸಿಸ್ಟೆಂಟ್ ಕಮ್ಮಿಷನರ್ ದರ್ಜೆಗೆ ಕಮ್ಮಿಯಿಲ್ಲದ ಯಾವ ಆಫಿಸರೇ ಆಗಲಿ ಅಥವಾ ಅಂಥಾ ಆಫಿಸರಿಂದ ಅಧಿಕಾರ ಹೊಂದಿದಂಥಾ ಯಾವ ಯಕೆಸೈಜ್ ಆಫಿಸರೇ ಆಗಲಿ ಕೇಳಿದಾಗ ಲೈಸೆನ್ಸುದಾರನು ಬಿಕರೀ ಬಗ್ಯೆ ಕೊಡೋಣಾದ ಈ ಲೈಸೆನ್ಸು ಅನುಸರಿಸಿ

ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿ ಇವುಗಳ ಅಸಲ್ ಇರ್ವಾಯಿಸ್ ಲಿಖ್ಖವನ್ನು ಹಾಜರ್ಮಾಡಲಿ ರತಕ್ಕದ್ದು.

XI. ಈ ಲೈಸೆನ್ಸುದಾರನು ತನ್ನ ಕೆಲಸವನ್ನು ನಿಲ್ಲಿಸಿ ಬಿಡಬೇಕಾದಾಗ _____ ರೂಲ್ಸು ಅನು ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನು ಮಾರಲಿಕ್ಕಾಗಿ ಲೈಸೆನ್ಸು ಪಡೆದಂಥಾ ಇತರ ರ್ಸುದಾರನಿಗೆ ಸದರೀ ಸಾರಾಯಿಯನ್ನು ವೊರತುಪಡಿಸಿ ಅಥವಾ ವರ್ಗ ಮಾಡಬಹುದು. ಹಾಗೆ ಮಾಡಬೇಕಾದರೆ ಆಗಲೀ ಈ ವರ್ಗಮಾಡಬೇಕಾದರೆ ಆಗಲಿ ಡೆಪ್ಯುಟಿ ಕಮ್ಮಿಷನರವರ ಎಕ್ಸೈಜ್ ಇಲಾಖೆಯಿಂದ ರುಜು ವೊಹರನ್ನು ಡ್ಯೂಪ್ಲಿಕೇಟ್ ರಹದಾರಿ ಯನ್ನು ಮುಂಚಿತವಾಗಿ ಪಡಿಯದೇ ಮಾರಲೂ ಕೂಡದು ವರ್ಗ ಮಾಡಲೂಕೂಡದು ; ಬರೀದಿ ಮೂಲಕ ಯಾ ವರ್ಗವಾಗಿ ಪಡೆಕೊಂ ಡ ಲೈಸೆನ್ಸುದಾರನು ಹಾಗೆ ಪಡಕೊಂಡದ್ದಕ್ಕಾಗಿ ಸದರೀ ರಹದಾರಿಯ ಎರಡನೇ ಪ್ರತಿಯನ್ನು ದಸ್ತೈವಜಾಗಿ ತನ್ನ ಬಳಿ ಯಿಟ್ಟುಕೊಂ ಡಿದ್ದು ಎಕ್ಸೈಜ್ ಆಫಿಸರು ತನಿಖೆ ಬಗ್ಗೆ ಯಾವಾಗಲಾದರೂ ಕೇಳಿದಾಗ ಅದನ್ನು ತೋರಿಸತಕ್ಕದ್ದು. ಬರೀದಿಮಾಡಿದವನು ಮತ್ತು ಬರೀ ದಿಗೆ ತೆಗದುಕೊಂಡವನು ಈ ಉಭಯತ್ರರೂ ಅಸಲ್ ರಹದಾರಿಗೆ ತಾರೀಖು ನಮೂದಿಸಿ ರುಜುಮಾಡಿ ಡೆಪ್ಯುಟಿ ಕಮ್ಮಿಷನರವರ ಎಕ್ಸೈ ಜ್ ಆಫಿಸಿಗೆ ವಾಪಸು ಕಳುಹಿಸತಕ್ಕದ್ದು.

XII. ಲೈಸೆನ್ಸುದಾರನು ಯಿಷುವ ಲಿಖ್ಖದಲ್ಲಿ ತಿಂಗಳು, ತಾರೀಖು, ಪರಾಯಿದೇಶದ ಸ್ಪಿರಿಟ್ ವ ಉಕ್ಕಿದ ಸಾರಾಯಿಗಳ ತೇದಾ ದು, ಮತ್ತು ತರಹೆಗಳು, ಥಾನವ ಮೂಲಕವಾಗಿ ಪಡದುಕೊಂಡದ್ದು, ಬಿಕರಿಯಾದ ತೇದಾದು ವ ಅದರ ಮೊಬಲಗು, ಮತ್ತು ರೋಜೀನಾ ಹಾಜೀ ಸರಕು, ಯಿವುಗಳ ಸಂಬಂಧ ವ ಕರಾರುವಾಕಾ ತಪಶೀಲ್ ನಮೂದಿಸತಕ್ಕದ್ದು; ಈ ಲಿಖ್ಖಗಳು ಯಾವಕಾಲದಲ್ಲಾಗಲಿ ಎಕ್ಸೈಜ್ ಇಲಾಖೆಯ ಆಫಿಸರ್‌ಗಳ ತನಖೆಗೆ ಒಳಪಟ್ಟಿರತಕ್ಕದ್ದು. ಈ ಲಿಖ್ಖದ ನೋಷ್ಯಾರೆಯನ್ನು ತನಿಖೆಯಿಂದ ಡೆಪ್ಯುಟಿ ಕಮ್ಮಿಷನರವರ ಆಫಿಸಿನ ಎಕ್ಸೈಜ್ ಇಲಾಖೆಗೆ ರವಾನಿಸತಕ್ಕ ಬಗ್ಗೆ ವೊಕರರಾಗಿರುವ ಎಕ್ಸೈಜ್ ಆಫಿಸರ ಬಳಿಗೆ ತಿಂಗಳಿಗೊಂದಾವರ್ತಿ ಯರಡು ಪ್ರತಿಗಳು ರವಾನಿಸಲ್ಪಡತಕ್ಕದ್ದು.

XIII. ಈ ಲೈಸೆನ್ಸು ಕ್ರಯ, ದಾನ, ಭೋಗ್ಯ ಯಾ ಮತ್ಯಾವ ರೀತಿಯಿಂದಲಾಗಲಿ ವರ್ಗವಾಗತಕ್ಕದ್ದಲ್ಲವು, ಮತ್ತು ಯಿದರ ಲ್ಲಿ ನಮೂದಿರುವವರು ಹೊರತು ಅನ್ಯಥಾ ಯಾರಿಗೇ ಆಗಲಿ ಈ ಲೈಸೆನ್ಸಿನ ಷರತ್ತುಗಳನುಸರಿಸಿ ನಡಿಯಲಿಕ್ಕೆ ಅಧಿಕಾರ ಇರುವದಿಲ್ಲ.

XIV. ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿನಡೆದರೆ, ಲೈಸೆನ್ಸುದಾರ ಅಥವಾ ದುಕ್ಕಾದಾರನು ಎಕ್ಸೈಜ್ ಕಾನೂನಿನಲ್ಲಿ ವ ಅದಕ್ಕನುಸರಿಸಿ ಮಾಡೋಣಾದ ನಿಬಂಧನೆಗಳಲ್ಲಿ ವಿಧಿಸಿರುವ ದಂಡನೆಗಳಿಗೆಲ್ಲ ಗುರಿಯಾಗುವದಲ್ಲದೆ (1885ನೇ ಇಸವಿ ಯ ಮೈಸೂರು IIIನೇ ರಗ್ಯುಲೇಷನ್) ಯಂಬ 1881ನೇ ಇಸವಿ XXIIನೇ ಆ್ಯನ 13ನೇ ಸೆಕ್ಷನ ಮೇರಿಗೆ ಡೆಪ್ಯುಟಿ ಕಮ್ಮಿಷ ನರವರಿಗೆ ಯುಕ್ತತೋರಿದಂತೆ ಲೈಸೆನ್ಸು ಸಹ ರದ್ದಾಗಲಿಕ್ಕೆ ಗುರಿಪಡಾಗಿರತಕ್ಕದ್ದು.

XV. ಈ ಲೈಸೆನ್ಸು 18 ನೇ ಇಸವಿ ಮಾರ್ಚಿ 31ರ ವರಿಗೆ ಜಾರೀಲಿರತಕ್ಕದ್ದು.

_____ ಡಿಸ್ಟ್ರಿಕ್ಟು

ಡೆಪ್ಯುಟಿ ಕಮ್ಮಿಷನರ್ ಆಫಿಸು
ತಾರೀಖು ನೇ

_____ ಡಿಸ್ಟ್ರಿಕ್ಟು

ಡೆಪ್ಯುಟಿ ಕಮ್ಮಿಷನರ್.

ಈ ಕೆಳಗೆ ರುಜು ಮಾಡುವಂಥಾ _____ ಲ್ಲಿ
ವಾಸವಾಗಿರುವ _____ ನ ಮಗನಾದ
_____ ಎಂಬ ನಾನು
ಮೇಲ್ಕಂಡ ಲೈಸೆನ್ಸುದಾರನಾಗಿ, ನನಿಗಾಗಿಯೂ, ನನ್ನ ವಾರ್ಸದಾರ್‌ರುಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು ವರ್ಗ ಪಡೆದಂಥಾವರಿಗೋಸ್ಕರವೂ ಯಿದರ ದೆಕೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ವಿವರಿಸೋಣಾದ ಕರಾರುಗಳಿಗೂ ವ ಷರತ್ತುಗಳಿಗೂ ವೊಪ್ಪಿರುತ್ತೇನೆ.

_____ ತಿಂಗಳ _____ ನೇ ತಾರೀಖಿನಲ್ಲಿ _____
_____ ರವರ ಕಚೇರಿಯಲ್ಲಿ ನನ್ನುಗಳ ರೂಬರೂ ರುಜು ವ ವೊಹರನೊಡನೆ ವೇಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು
1 _____
2 _____
3 _____

ಲೈಸೆನ್ಸುದಾರ

ಯಾರ ರೂಬರೂ ರುಜು ಮಾಡಲ್ಪಟ್ಟಿತೋ ಆ ಆಫಿಸರರ ರುಜು.

ಬೆಂಗಳೂರು ವ ಮೈಸೂರು ಪಟ್ಟಣಗಳ ಮ್ಯುನಿಸಿಪಲ್ ರಗ್ಯುಲೇಷನಿನ 58ನೇ ಸೆಕ್ಷನ ಅನುಸರಿಸಿ ರಿಜಿಸ್ಟರ್ ಮಾಡಿದಬ್ಗ್ಯೆ ಸರಟಿಫಿಕೇಟ್
ತಾರೀಖು ನೇ

ಪ್ರೆಸಿಡೆಂಟ್ (ಅಥವಾ ವೈಸ್ ಪ್ರೆಸಿಡೆಂಟ್)
ಮ್ಯುನಿಸಿಪಾಲಿಟಿ.

ಬ

ತಾರೀಖು 5ನೇ ಜೂ೯ 1889.

ನಂ. 60.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯ ವಿನಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತಿ ಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿ ವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಆ ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ವರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡಿಪ್ಯೂಟಿ ಕಮ್ಮಿಷ ನರವರು ತಮ್ಮ ಯಜ್ಞಾಧ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇಬೇರೆಯಾ ಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ ಪೈಕಿ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋಪರೆ, ಅಥವಾ ಬಾಕಿ ಕ್ರಯದ ಮೊಬಲನ್ನು ಪಾವತಿ ಮಾಡದಿದ್ದರೆ ಜಮೀ ನುಗಳು ಅವ್ವಲ್‌ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಮಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೇ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡ ಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿ ಸಲ್ಪಡಬಹುದು.

6. ಸಕ್ತಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಬೀಲ್ ಕಂ ದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂ ದು ತೃಪ್ತಿಕರವಾಗಿ ರುಜುವಾತು ಹುಡಿದಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹಪಾಜೆ ಖಾಯಮಾದ್ಯಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲನ್ನು ಪೂರ್ತಿಯಾಗಿ ಪಾವತಿ ಮಾಡಿ ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂ ಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು ಕ್ರಯದಾರನ ಹೆಸರಿನಲ್ಲಿ ರಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಸರವರಿಂದ ರುಜು ಮೊ ಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲಿನಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ ಇರು ವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ವರಂತು ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊ ಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ ಅಂಥಾ ಅಪ್ಪೀಲಿನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟ್. ತಾಲ್ಲೂಕು. ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಪುರಸ್ಕಾರಕ್ಕೆ ಕೊಟ್ಟುವಳೀ ಯಾಡಬೇಕಾದ ಕ್ಯೆ ಪೆರೆಂಟ್.	ಸಾಲಿಯಾನಾ ಸರಕಾರದ ಕಂದಾಯದ ಬಾಕೀ.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಆಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
ಮೈಸೂರು. ನಂಜನಗೂಡು. ತಾಯೂರು.	ಜೋಡಿ ಯಿಗ್ಗಲಿ.	1. ವರದರಾಜಸ್ವಾಮಿ ದೇವರು 2. ತ್ರಿಣೇಶ್ವರಸ್ವಾಮಿ ದೇವರು ಮತ್ತು ಯಿತರ 23 ಮಂದಿ.	ಖಂ. ಕೂ. ಪ. 0 0 0	ರೂ. ಆ. ಪೈ. 573 0 6	ರೂ. ಆ. ಪೈ. 527 0 0	ರೂ. ಆ. ಪೈ. 1068 9 0 ಮತ್ತು ಬಡಿ	ತಾಲ್ಲೂಕು ಕಛೇರಿಯಲ್ಲಿ ಆಮಲ್ದಾರ್ರ ರೂಬರೂ ಮುಂದಿನ ತಿಂಗಳು 10ನೇ ತಾರೀಖಿನಲ್ಲಿ.

ಪ್ರಾ.—ಜೋಡೀದಾರರುಗಳಂತಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ, ಉಂಟುಮಾಡಲ್ಪಟ್ಟ ತ ಮಾಂ ಹಿಡುವಳಿಗಳಿಗೂ, ದೇಣಿಗೆಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ಪಳವಟ್ಟಿರುವದಿಲ್ಲ.

ತಾರೀಖು 3ನೇ ಜೂ೯ 1889.

ನಂ. 70.—ಶಿವಮೊಗ್ಗಾ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ಜಂಗಲಿಗಳಲ್ಲಿ ಸುಡಲ್ಪಡುವ ಯಿದ್ದಲಿನ ಮೇಲೆ ವಸೂಲ್ಮಾಡಲ್ಪಡಬೇಕಾದ ತೀರ್ವೆದರಗಳನ್ನು ವಿವರಿಸುವ 1887ನೇ ಇಸವಿ ಡಿಸಂಬರ್ 20ನೇ ಮತ್ತು ಂ 177ನೇ ನಂಬರ್‌ವುಳ್ಳ ಇಸ್ತಿಹಾರನಾಮೆಯ 9ನೇ ಕಲ

"ಕಂದಾಯ ತೆರುವ ರೈತರು" ಯಂಬದಾಗಿ ಆರಂಭಿಸಿ "ಬದಸ್ತೂರ ಗುರಿಯಾಗಿರತಕ್ಕದ್ದು" ಯಂಬದಾಗಿ ಆಶೈರಾಗುವ ವಾಕ್ಯ ದ ಮಾತುಗಳು ಬಿಡಲ್ಪಟ್ಟು ಆದಕ್ಕೆ ಬದಲಾಗಿ ಇದರಡಿ ಬರುವದು ಕೆರಿಸಲ್ಪಡತಕ್ಕದ್ದು, ಯೇನಂದರೆ:—

"ಮೇಲ್ಕಂಡ ರೂಲ್ಸು, ಕಂದಾಯ ತೆರುವಂಥಾ ರೈತರು, ಮತ್ತು ಮೊಹತರ್ಫಾ ತೆರುವಂಥಾ ಸುಂಣ ಸುಡುವರು ಮತ್ತು ಯಿದ್ದ ಸುಡುವರು, ಖಬ್ಬಿಣ ಕರಗಿಸುವಂಥಾವರು ಯಾ ಲೋಹಾರರು ಯಿವರುಗಳು ಯಿದ್ದಲು ಸುಡುವ ಬಗ್ಯಾಗಿ ಸಾದೇಯನ್ನು ಮುಫತ್ತಾಗಿ ಪಡೆಯುವ ಹಾಲಿ ಜಾರಿಯಲ್ಲಿರುವ ರಿಯಾಯತಿಗಳಿಗೆ ಲಗಾವಾಗುವದಿಲ್ಲವು. ಮೊಹತರ್ಫಾ ಕಂದಾಯ ತೆರುವಂಥಾ ಸುಂಣದ ಗೂಡು ಮತ್ತು ಯಿದ್ದಲು ಸುಡುವವರು, ಖಬ್ಬಿಣ ಕರಗುವರು ಯಾ ಲೋಹಾರರು ಯಿವರುಗಳು (ಪರಂತು ಕಂದಾಯ ತೆರುವಂಥಾ ರೈತರುಗಳ್ಳವಿನಾ) ಯಿದ್ದಲು ಸುಡುವಬಗ್ಯೂ ಸಾದೆಯನ್ನು ಈತ್ತರಿಸುವ ಬಗ್ಯೂ ಮಾಫೀ ರಹದಾರಿಯನ್ನು ಪಡೆಯಲಿಕ್ಕೂ ಮತ್ತು ಅಂಥಾ ಲೈಸೆನಿನ ಷರತ್ತುಗಳ ಪ್ರಕಾರ ನಡೆದುಕೊಳ್ಳುವದಕ್ಕೂ ಒದ್ದರಾಗಿರತಕ್ಕದ್ದು. ಮೇಲ್ಕಂಡ ರಿಯಾಯಿತಿಯು, (ಲೈಸೆನ್ಸು ಯಿಲ್ಲದೆಯೇ ರೈತರು ಮುಫತ್ತಾಗಿ ಸಾದೆಪಡೆಯುವ ಹಕ್ಕು ದೇಖೀಲ್) ದುರುಪಯೋಗ ಪಡಿಸಲ್ಪಟ್ಟಾಗ ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು.

ತಾರೀಖು 1ನೇ ಜೂನ್ 1889.

ನಂ. 64.—ಇದರಡಿ ಕಂಡ ನಿಬಂಧನೆಯು, ಮೈಸೂರು, ಕಡೂರು, ಚಿತ್ರದುರ್ಗ, ಹಾಸನ, ತುಮಕೂರು, ಮತ್ತು ಕೋಲಾರ ಈ ಡಿಸ್ಟ್ರಿಕ್ಟುಗಳ ಡಿಸ್ಟ್ರಿಕ್ಟು ಜಂಗಲ್‌ಗಳಲ್ಲಿ ಕಡಿಯಲ್ಪಡುವ ಯಾ ಸುಡಲ್ಪಡುವ ಸಾದೆ ಮತ್ತು ಇದ್ದಲು ಇವುಗಳ ಮೇಲೆ ವಸೂಲ್ಮಾಡಲ್ಪಡಬೇಕಾದ ಸೀನಿಯೂರೇಜ್ ಯಾನೇ ತೀರ್ವೆಗೆ ಸಂಬಂಧಪಟ್ಟ ನಿಬಂಧನೆಗಳನ್ನು ವಿವರಿಸುವಂಥ 1888ನೇ ಇಸವಿ ಆಗಸ್ಟು 13ನೇ ಮುಕ್ತಂ 112ನೇ ನಂಬರು, 1888ನೇ ಇಸವಿ ಆಗಸ್ಟು 13ನೇ ಮುಕ್ತಂ 113ನೇ ನಂಬರು, ಅದೇ ಇಸವಿ ಸೆಪ್ಟಂಬರ್ 10ನೇ ಮುಕ್ತಂ 127ನೇ ನಂಬರು, ಅದೇ ಇಸವಿ ಡಿಸಂಬರ್ 18ನೇ ಮುಕ್ತಂ 161ನೇ ನಂಬರು, ಮತ್ತು 1889ನೇ ಇಸವಿ ಜನವರಿ 28ನೇ ಮುಕ್ತಂ 195ನೇ ನಂಬರು, ಈ ನಂಬರುಗಳ ಇಸ್ತಿಹಾರ್ನಾಮೆಯ 10ನೇ ಕಲಮಿಗೂ ಮತ್ತು 1888ನೇ ಇಸವಿ ಅಕ್ಟೋಬರ್ 25ನೇ ಮುಕ್ತಂ 1483ನೇ ನಂಬರ್‌ವುಳ್ಳ ಇಸ್ತಿಹಾರ್ನಾಮೆಯ 9ನೇ ಕಲಮಿಗೂ ಬದಲಾಗಿ ಕೆರಿಸಲ್ಪಡತಕ್ಕದ್ದು:—

"ಈ ನಿಬಂಧನೆಗಳು, ಸೀನಿಯೂರೇಜ್ ತೀರ್ವೆಯನ್ನು ವಿಧಿಸುವಷ್ಟರ ಮಟ್ಟಿಗೆ, ಕಂದಾಯ ತೆರುವಂಥಾ ರೈತರು ಮತ್ತು ಮೊಹತರ್ಫಾ ತೆರಿಗೆ ತೆರುವಂಥಾ ಕಬ್ಬಿಣ ಕರಗಿಸುವವರು ವ ಲೋಹಾರ್ ಇವರುಗಳು ವಾಸ್ತವ್ಯವಾಗಿ ಅವರ ಸ್ವಂತ ಕೆಲಸಕ್ಕೋಸ್ಕರ ಸಾದೆಯಾ ಇದ್ದಲನ್ನು ಮುಫತ್ತಾಗಿ ಪಡೆಯುಂಥಾ ಹಾಲಿ ಜಾರಿಯಲ್ಲಿರುವ ಹಕ್ಕುದಾರಿಗಳಿಗೆ ಲಗಾವಾಗುವದಿಲ್ಲವು. ಮೊಹತರ್ಫಾ ತೆರಿಗೆ ತೆರತಕ್ಕಂಥಾ ಕಬ್ಬಿಣ ಕರಗಿಸುವರು ಮತ್ತು ಲೋಹಾರರು (ಪರಂತು ಕಂದಾಯ ತೆರತಕ್ಕಂಥಾ ರೈತರು ವಿನಾ) ಸಾದೆಯನ್ನು ಕಡಿಯುವ ಬಗ್ಯಾಗಲಿ ಯಾ ಇದ್ದಲು ಸುಡುವ ಬಗ್ಯಾಗಲಿ ಮಾಫೀ ಲೈಸೆನುಗಳನ್ನು ಪಡೆಯುವದಕ್ಕೂ ಮತ್ತು ಅಂಥಾ ಲೈಸೆನುಗಳ ಷರತ್ತುಗಳ ಪ್ರಕಾರ ನಡೆದುಕೊಳ್ಳುವದಕ್ಕೂ ಒದ್ದರಾಗಿರತಕ್ಕದ್ದು. ಮುಫತ್ತಾಗಿ ಪಡೆದುಕೊಂಡ ಸಾದೆ ಅಥವಾ ಯಿದ್ದಲು ಬಿಕರೀ ಮಾಡಲ್ಪಡಕೂಡದು, ವಿನ್ಯಯ ಮಾಡಲ್ಪಡಕೂಡದು ಅಥವಾ ವ್ಯಾಪಾರ ಕೆಲಸಕ್ಕಾಗಿ ಅನ್ಯಥಾ ಉಪಯೋಗಿಸಲ್ಪಡಕೂಡದು. ರೈತರುಗಳು ಬಗರ್‌ಲೈಸೆನಿನಿಂದ ಮುಫತ್ತಾಗಿ ಸಾದೆ ಮತ್ತು ಇದ್ದಲು ಪಡೆಯಬಹುದಾದ ಹಕ್ಕುದಾರಿ ದೇಖೀಲ್ ಈನಿಬಂಧನೆಯಲ್ಲಿ ನಮೂದು ಮಾಡಲ್ಪಟ್ಟ ಹಕ್ಕುದಾರಿಗಳು ದುರುಪಯೋಗ ಪಡಿಸಲ್ಪಟ್ಟಾಗ ರದ್ದುಮಾಡಲ್ಪಡಲಿಕ್ಕೆ ವಳಪಟ್ಟಿರತಕ್ಕವು".

ತಾರೀಖು 12ನೇ ಜೂನ್ 1889.

ಕ್ಯಾಂಪ್ ನಂ. 167.—ತಿಪಟೂರು ತಾಲ್ಲೂಕು ಅಮಲ್ದಾರ್ ರಾಮಸ್ವಾಮಯ್ಯನವರಿಗೆ, 1889ನೇ ಇಸವಿ ಮೇ 17ನೇ ಮುಕ್ತಂ 44ನೇ ನಂಬರ್‌ಉಳ್ಳ ಈ ಆಫಿಸ ಇಸ್ತಿಹಾರ್ನಾಮೆಯಿಂದ ಕೊಡಲ್ಪಟ್ಟ 15 ದಿವಸಗಳ ಪ್ರಿವಿಲೀಜ್ ರಜಾವು ಯಿನ್ನೂ 8 ದಿವಸಗಳ ಪರಿಯಂತ ಜಾಸ್ತಿ ಮಾಡಲ್ಪಟ್ಟಿರುತ್ತೆ.

ನಂ. 73.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 206ನೇ ಸೆಕ್ಷನ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟು ಆಕ್ಟಿಂಗ್ ಆಸಿಸ್ಟೆಂಟ್ ಕಮ್ಮಿಷನರ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟರಾದ ಮೆ॥ ಎಚ್. ವೆಂಕಟರಾಯರಿಗೆ, ಮೊಕದ್ದಮೆಗಳನ್ನ ಸೆಷ್ಷನ್‌ಕೋರ್ಟಿಗೆ ಕಮ್ಮಿಟ್ ಮಾಡುವ ಅಧಿಕಾರವೂ ಮತ್ತು ಕ್ರಿ. ಪ್ರೊ. ಕೋಡಿನ 357ನೇ ಸೆಕ್ಷನ ಅನುಸರಿಸಿ, ಸಾಕ್ಷ್ಯಗಳ ವಾಗ್ಮೂಲವನ್ನು ಸ್ವದಸ್ತೂರ್ ಇಂಗ್ಲೀಷ್ ಭಾಷೆಯಲ್ಲಿ ಬರೆದುಕೊಳ್ಳುವ ಅಧಿಕಾರವೂ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 216.—ಕೋಲಾರ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಕೆ. ರಾಮಚಂದ್ರರಾಯರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು 20 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 218.—ದಿವಾನರವರ ಆಫಿಸಿನಲ್ಲಿ ಕೆಲಸನೋಡುತ್ತಿರುವ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಯಂ. ನಾರಾಯಣರಾಯರಿಗೆ, 1889ನೇ ಇಸವಿ ಜೂನ್ 11ನೇ ಮುಕ್ತಂ ಲಗಾಯತು 3 ವಾರಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 220.—1889ನೇ ಇಸವಿ ಫೆಬ್ರವರಿ 5ನೇ ಮುಕ್ತಂ 7140—71—ಸರ್‌ಕಿಲರ್ 200ನೇ ನಂಬರ್‌ಉಳ್ಳ ದಿವಾನರವರ ಪ್ರೊಸಿಡಿಂಗ್ಸಿನ ಷರತ್ತುಗಳನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಯ್. ವೆಂಕಟರಾಯರಿಗೆ, 1889ನೇ ಇಸವಿ ಜೂನ್ 14ನೇ ತಾರೀಖು ಲಗಾಯತು ಯಾ ಅವರು ರಜಾ ರಹ್ತಾದ ಮೊದಲು 7 ದಿವಸಗಳ ಕ್ಯಾಜುಎಲ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 165.—(1888ನೇ ಇಸವಿ IIIನೇ ನಂಬರ ರೆಗ್ಯುಲೇಷ್ನ) ಯಂಬ ಮೈಸೂರು ಮ್ಯುನಿಸಿಪಲ್ ರೆಗ್ಯು
ನ 240ನೇ ಸೆಕ್ಷನಿನ ನಿಯಮಗಳನುಸರಿಸಿ ವಸೂಲ್ಮಾಡಲ್ಪಡಬೇಕಾದ ಇದರಡಿಕಂಡ ಲೈಸೆನ್ಸು ಫೀ ಪಟ್ಟಿಯು ಮೈಸೂರು ಪ
ಜಾರೀಮಾಡಲ್ಪಡತಕ್ಕ ಬಗ್ಗೆ ಶ್ರೀಮ೯ ಮಹಾರಾಜ ರಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ನುಂಜಾರ್ಮಾಡಲ್ಪಟ್ಟು ಸರ್ವರ ತಿ
ಗೆಬಗ್ಯಾಗಿ ಇದರ ದೆಕೆಯಿಂದ ಘೋಷಿಸ್ ಮಾಡಲ್ಪಡುತ್ತೆ:—

ನಂಬರ್.	ಲೈಸೆನ್ಸಿಗೆ ಬಳಪಟ್ಟ ಬಾಬುಗಳು.	ರೆಗ್ಯುಲೇಷನ್ಸ್ ಯಾ ಸೆಕ್ಷನ್ ಅನುಸರಿಸಿ ಲೈಸೆನ್ಸು ಕೊಡತಕ್ಕ ಪುಟ.	ಮಂಜೂರ್ಮಾಡಲ್ಪಟ್ಟ ಲೈಸೆನ್ಸು ಫೀ ದರ.
1	ಬಿಸಲುಚಪ್ಪರಗಳನ್ನ ಹಾಕುವಬಗ್ಯಾದ ಅಪ್ಪಣೆ ಯಾ ಲೈಸೆನ್ಸು ಬಗ್ಗೆ ..	128	ಬಿಸಲು ಚಪ್ಪರ ಒಂದಕ್ಕೆ ಒಂದು ರೂಪಾಯಿನಂತೆ
2	ಬಾಡಿಗೆ ಕುದುರೆ ಯಾ ಬಂಡಿ ತಬೇಲೆ ಯಿಡುವ ಬಗ್ಗೆ ಲೈಸೆನ್ಸು. ..	137	ತಬೇಲೆ ವಂದಕ್ಕೆ ಸಾಲಿಯಾನಾ 2 ರೂಪಾಯಿ ಪ್ರಕಾರ
3	ಭಂಡೀಮೋಟಿನ ಬಗ್ಗೆ ಡಿಟೋ ..	137	ಪ್ರತಿ 200 ಚದರಗಜ ಯಾ ಆದಕ್ಕೆ ಕಮ್ಮಿಯಿರುವ ವಿಸ್ತೀರ್ಣಕ್ಕೆ ಸಾಲಿಯಾನಾ ವಂದು ರೂಪಾಯಿ ಪ್ರಕಾರ
4	10 ದನಗಳಿಗಿಂತ ಜಾಸ್ತಿಯಾಗಿ ದನಗಳನ್ನುಳ್ಳ ಕೊಟ್ಟಿಗೆ ಬಗ್ಗೆ ಡಿಟೋ ..	137	ಹತ್ತು ದನಗಳಿಗಿಂತ ಜಾಸ್ತಿಯಾಗಿರುವ ಪ್ರತಿ ದನಕ್ಕೂ ಸಾಲಿಯಾನಾ ಯಿಂಟಾಣೆ ಪ್ರಕಾರ
5	20 ಯಾ ಹೆಚ್ಚು ಸಂಬೆವುಳ್ಳ ಕುರಿ ಯಾ ಮೇಕೆಗಳನ್ನಿಡುವ ಬಗ್ಗೆ ಡಿಟೋ ..	137	20ಕ್ಕಿಂತಲೂ ಜಾಸ್ತಿಯಾದ ಪ್ರತಿ ಕುರಿ ಯಾ ಮೇಕೆಗೆ ಸಾಲಿಯಾನಾ ಯರಡಾಣೆ ಪ್ರಕಾರ
6	ಯಿಟ್ಟಿಗೆ ಗೂಡಿನ ಬಗ್ಗೆ ಲೈಸೆನ್ಸು .	185	ವಂದು ಲಕ್ಷ ಯಾ ಆದಕ್ಕೆ ಕಮ್ಮಿಸಂಖೆಯುಳ್ಳ ಯಿಟ್ಟಿಗೆ ಯಿರತಕ್ಕ ಪ್ರತಿ ಗೂಡಿಗೂ ೫ ರೂಪಾಯಿ ಪ್ರಕಾರ
7	ತಾರಸು ಯಿಟ್ಟಿಗೆ ಸುಡುವ ಬಗ್ಗೆ ಲೈಸೆನ್ಸು ..	185	ವಂದು ಲಕ್ಷ ಯಾ ಆದಕ್ಕೆ ಕಮ್ಮಿಸಂಖೆಯುಳ್ಳಯಿಟ್ಟಿಗೆ ಗೂಡು ವಂದಕ್ಕೆ ಯರಡು ರೂಪಾಯಿ ಪ್ರಕಾರ
8	ಗಡಿಗೆ, ಉರಟುಹಂಚು ಮತ್ತು ಚದರಹಂಚು ಯಿವುಗಳನ್ನಸುಡುವ ಕುಂಬಾರ ಸೂಳು ಬಗ್ಯಾಗಿ ಲೈಸೆನ್ಸು.	185	ಪ್ರತಿಸೂಳಿಗೂ ಸಾಲಿಯಾನಾ 2 ರೂಪಾಯಿ ಪ್ರಕಾರ
9	ಸಾಪೆ ಡಿಪೊಬಗ್ಯೆ ಲೈಸೆನ್ಸು ..	185	ಡಿಪೋ ವಂದಕ್ಕೆ ಮೂರು ರೂಪಾಯಿ ಪ್ರಕಾರ
10	ನಾಟೂ ಡಿಪೊಬಗ್ಯೆ ಡಿಟೋ ..	185	ಡಿಪೋ ವಂದಕ್ಕೆ ಆರು ರೂಪಾಯಿ ಪ್ರಕಾರ
11	ಇತರ ಯಾವದಾದರೂ ಬೆಲ್ಲರೆ ಲೈಸೆನ್ಸು ..	185	ಲೈಸೆನ್ಸು ವಂದಕ್ಕೆ ಯಂಟಾಣೆ ನೇರೆ

ಕ್ಯಾಂಪ್ ನಂ. 170.—ಹಾಸನ ತಾಲ್ಲೂಕು ಅಮಲ್ದಾರ್ ಹೆಚ್. ಆರ್. ಶ್ರೀನಿವಾಸರಾಯರಿಗೆ, ಅವರು ಉಪಯೋಗಿಸಿಕೊಂಡ ಹಾರೀಖು ಲಾಗಾಯತು 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹೆಚ್. ಆರ್. ಶ್ರೀನಿವಾಸರಾಯರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಸದರೀ ತಾಲ್ಲೂಕು ತಿರಸ್ತೇದಾರ್ರು ತಾಲ್ಲೂಕು ಚಾರ್ಜ್ ವಹಿಸಿರತಕ್ಕದ್ದು.

ತಾರೀಖು 14ನೇ ಜೂ೯ 1889.

ನಂ. 248.—ಅಡ್ವೊಕೇಟ್ ಮೆ|| ಈ. ಸಿಡ್ನಿ. ಸ್ಮಿತ್‌ಯವರು, ಮೆ|| ಸಿ. ಮಿನಾಕ್ಷಯ್ಯನವರು ಇತರ ಕೆಲಸದ ಮೇಲಿರುವ ಕಾಲದಲ್ಲಿ, ಗವರ್ಮೆಂಟ್ ಅಡ್ವೊಕೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ರ್ಮಾಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 253.—1889ನೇ ಇಸವಿ ಜುಲೈ 1ನೇ ತಾರೀಖು ಮತ್ತು ಆತರುವಾಯ ಮೈಸೂರು ದೇಶದ ಖಜಾನೆಗಳಿಂದ ಬಳದೇಶದ ಮನಿಆರ್ಡರುಗಳಾಗಲಿ ಯಿಂಪಿರಿಯಲ್ ಯಾ ಪರಾಯಿದೇಶದ ಮನಿಆರ್ಡರ್ ಹಣ ಸಂದ ಬಗ್ಯೆ ರೀತಿಯಾಗಲಿ ಕೊಡಲ್ಪಡುವ ಪದ್ಧತಿಯು ಮನ್ನಾಮಾಡಲ್ಪಟ್ಟಿರುತ್ತೆ. ಪರಂತು ಸದರೀ ಖಜಾನೆಗಳಲ್ಲಿ ಇದಕ್ಕೆ ಪೂರ್ವನೇ ಕೊಡೋನಾಗಿ ವಾಯಿದೆ ಮೀರದಂಥಾ ಮನಿಆರ್ಡರ್‌ಗಳಿಗೆ ಹಣ ಪಾವತಿ ಮಾಡಲ್ಪಡುವದಲ್ಲದೆ ಯಿದುವರಿಗೆ ಜಾರಿಯಲ್ಲಿ, ಯಿದ್ದ ಮನಿಆರ್ಡರ್ ರೂಲ್ಸ್‌ಗಳನುಸರಿಸಿ ಅಂಥಾ ಮನಿಆರ್ಡರ್‌ಗಳಿಗೆ ಸಂಬಂಧಪಟ್ಟ ನಂಗತಿಗಳಲ್ಲಿ ದರಖಾಸ್ತುದಾರರ ಅರ್ಜಿಗಳಿಗೆ ಗಮನಕೊಡುವರು.

ತಮಾಂ ತರಹೆಯ ಮನಿಆರಡರುಗಳಿಗಾಗಿ ಬರುವ ಹೊಸದರಖಾಸ್ತುಗಳು ಪೋಸ್ಟ್ಮಾಫೀಸು ಮನಿಆರಡರ್ ರೂಲಸಿ ಅನುಸರಿಸಿಮನಿ ಆರಡರ ಕೆಲಸಗಳನ್ನು ನಡಿಸುವ ಬಗ್ಯೆ ಅರ್ಹರಾದಂಥಾ ಮತ್ತು ಮೈಸೂರು ದೇಶದಲ್ಲಿ ಸ್ಥಾಪಿಸಿರುವಂಥಾ ಪೋಸ್ಟ್ಮಾಫೀಸುಗಳಿಗೆ ರಿಫರ್ ಮಾಡಲ್ಪಡತಕ್ಕದ್ದು.

ಕ್ಯಾಂಪ್ ನಂ. 259.—ಸ೯ 1888ನೇ ಇಸವಿಯ IVನೇ ನಂಬರ ರೆಗ್ಯುಲೇಷ್ನ ಆದ ಮೈಸೂರು ಲ್ಯಾಂಡ್ ರವಿನ್ಯು ಕೋಡಿನ 236ನೇ ಸೆಕ್ಷನಿನ ಯಾರಪನೇ ಪ್ಯಾರಾ ಅನುಸರಿಸಿ ಸದರೀ ಕೋಡಿನ VIII ಮತ್ತು IXನೇ ಚಾಪ್ಟರುಗಳ ನಿಯಮಗಳು ಇದರಡಿ

ಪರಿಹಾರೇ ಮಾಡಲ್ಪಟ್ಟ ಗ್ರಾಮಗಳಿಗೆ ಲಗಾವು ಮಾಡಲ್ಪಡತಕ್ಕದ್ದೆಂದು ಮೈಸೂರು ಶ್ರೀಮನ್ ಮಹಾರಾಜ ರಾಜಾನುಹೆಬ್ ಬಹದ್ದೂರವರು ಅಜ್ಞಾಪಿಸಿರುತ್ತಾರೆ.

	ಗ್ರಾಮಗಳ ಹೆಸರು.		ಯಾವ ತಾಲ್ಲೂಕಿನಲ್ಲಿರತಕ್ಕದ್ದು.
1	ಸರ್ವಮಾನ್ಯ ಅಂಬಳಿ		ನಂಜನಗೂಡು
2	ಡಿಟೋ ಕಾಸಲೂರು		
3	ಜೋಡೀ ರಾಂಪುರ	.. ..	ಶ್ರೀರಂಗಪಟ್ಟಣ
4	ಉಕ್ಕಲಗಿರಿ	.. ..	ತಿರುಮಕೂಡ್ಲುನರಸೀಪುರ
5	ನಲ್ಲುಂದಿ	..	ನಾಗಮಂಗಲ
6	ಮುತ್ತಸಂದ್ರ	..	
7	ದೊಡ್ಡಬೆಲೆ	..	
8	ಕಲ್ಗೊಂಡಹಳ್ಳಿ	..	ಬೆಂಗಳೂರು

ಕ್ಯಾಂಪ್ ನಂ. 264.—ಪೊಲೀಸ್ ಇನ್‌ಸ್ಪೆಕ್ಟರ್ ಮಹಮ್ಮದರಜಾ ಯಂಬುವರಿಗೆ, ಅಮಲ್ದಾರ್ ಖಾದರಲ್ಲಿಯವರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಖು ಕೆಲಸನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತೆ.

ಇದರ ದೆಕೆಯಿಂದ 1889ನೇ ಇಸವಿ ಮೇ 30ನೇ ಮಕ್ತುಂ ಕ್ಯಾಂಪ್‌ನಂಬರ್ 99ನೇ ಇಸ್ತಿಹಾರ್‌ನಾಮೆಯು ರದ್ದು ಮಾಡಲ್ಪಟ್ಟಿರುತ್ತೆ.

ಕ್ಯಾಂಪ್‌ನಂ. 280.—ಕೋಲಾರದ ಡೆಪ್ಯೂಟಿ ಕಮ್ಮಿಷನರ್ ಆಫಿಸ್ ಹೆಡ್‌ಕ್ಲರ್ಕ್ ಬಿ. ಶ್ರೀನಿವಾಸರಾಯರಿಗೆ ಮತ್ತೊಂದು ಹುಕುಂ ಕೊಡುವ ಪರಿಯಂತ ಗೋರೀಬಿದನೂರು ತಾಲ್ಲೂಕು ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತೆ.

ತಾರೀಖು 15ನೇ ಜೂರ್ಲೈ 1889.

ನಂ. 72.—ಅಸಿಸ್ಟೆಂಟ್ ಕಮ್ಮಿಷನರ್ ಮೂ|| ಬಿ. ಚಿ. ಕೃಷ್ಣಯ್ಯಂಗಾರ್ರು ಹಾಸನ ಡಿಸ್ಟ್ರಿಕ್ಟ್ ಟ್ರೆಜರೀ ಚಾರ್ಜನ್ನ 1889ನೇ ಇಸವಿ ಜೂರ್ಲೈ 5ನೇ ತಾರೀಖಿನ ಪೂರ್ವಾನ್ಹದಲ್ಲಿ ಮುಳಿಳಿ ಉ. ಮಂಗಪತಿನಾಯಡರವರಿಗೆ ಒಪ್ಪಿಸಿರುತ್ತಾರೆ.

ತಾರೀಖು 19ನೇ ಜೂರ್ಲೈ 1889.

ನಂ. 74.—ಮೈಸೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ವ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟರಾದ ಮೂ|| ಯಂ. ರಾಮಸ್ವಾಮಿ ಆಯ್ಯರವರಿಗೆ ಇದರಡಿಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ:—

1 ನೇಕ್‌ಚಾಲ್ ಜಾಮೀನೀ ತೆಗೆದುತಕ್ಕ ಬಗ್ಯೆ ಅಧಿಕಾರ (ಕ್ರಿ|| ಪ್ರೊ|| ಕೋಡ್ ಸೆಕ್ಷನ್ 110)

2 ಸ್ಥಳಿಕ ಹೇತಿಕೆಗಳ ವಿಷಯದಲ್ಲಿ ಹುಕುಂ ಕೊಡುವದಕ್ಕೆ ಅಧಿಕಾರ (ಕ್ರಿ|| ಪ್ರೊ|| ಕೋಡ್ ಸೆ|| 133.)

ತಾರೀಖು 1ನೇ ಜೂರ್ಲೈ 1889.

ನಂ. 69.—ಸನ್ 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 23ನೇ ಸೆಕ್ಷನ್ ಅನುಸರಿಸಿ ಮತ್ತು 1886ನೇ ಇಸವಿಯ ಏಪ್ರೆಲ್ 3ನೇ ಮಕ್ತುಮಿನ ಮೈಸೂರ ಗೆಜೆಟ್ಟಿನಲ್ಲಿ ಘಾಯಿಷ್ ಮಾಡೋಣಾದ 1886ನೇ ಇಸವಿ ಮಾರ್ಚಿ 3ನೇ ಮಕ್ತುಂ 239ನೇ ನಂಬರ್ ಇಸ್ತಿಹಾರನ್ನ ತಿದ್ದುಪಾಟು ಮಾಡಿ, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಡಿಸ್ಟ್ರಿಕ್ಟ್ ಜಂಗ್ಲಿಗಳಲ್ಲಿ ಸಾದೆ ಕಡಿಯತಕ್ಕ ಬಗ್ಯೂ ಇದ್ದಲನ್ನ ಸುಡುವ ಬಗ್ಯೂ ಇದರಡಿ ಕಂಡ ಮೇರಿಗೆ ಸೀನಿಯಾರೇಜ್ ತಿರ್ವೆಗಳು ವಸೂಲಾಗತಕ್ಕದ್ದೆಂದು ವಿಧಿಸೋಣಾಗಿರುತ್ತದೆ:—

ಸಾದೆ.—

	ತೀರ್ವೆ ಪಾವತಿಯಿಂದ ಮೊದಲು ಲೈಸೆನ್ಸ್ ಪಡೆದರೆ.		ತೀರ್ವೆ ಪಾವತಿಯಿಂದ ಮೊದಲು ಲೈಸೆನ್ಸ್ ಪಡೆಯದಿದ್ದರೆ.
ಚಕ್ಕಡಾ ಛಂಡೀ ಬೋಜೆ 1ಕ್ಕೆ	6 ಆಣೆ.	..	7 ಆಣೆ.
ವಡ್ಡರಛಂಡಿ ಬೋಜೆ 1ಕ್ಕೆ	4 „	..	5 „
ಯತ್ತಿನಬೋಜೆ 1ಕ್ಕೆ	1 „ 3 ಪೈ	..	1 „ 6 ಪೈ
ಕತ್ತೆಬೋಜೆ 1ಕ್ಕೆ	9 ಪೈ	..	1 „
ಲೋಸ್ಟೆಜೆಡ್ ಅಂದರೆ ಚಿಕ್ಕವ್ಯಾಗ್ಗ 1ಕ್ಕೆ	1—8—0	..	1—12—0
ಹೈಸ್ಟೆಜೆಡ್ ಅಂದರೆ ದೊಡ್ಡವ್ಯಾಗ್ಗ 1ಕ್ಕೆ	3—0—0	..	3—8—0
ಕವರ್ಡ್ ಅಂದರೆ ಛಾವಣಿಯಳ್ಳ ವ್ಯಾಗ್ಗ 1ಕ್ಕೆ	4—0—0	..	4—10—0

ಯಿದ್ದಲು.—

	ರೂ.	ಆ.
ಭಂಡಿ ಜೋಜೆ 1ಕ್ಕೆ	2	8
ಯತ್ತಿನ ಜೋಜೆ 1ಕ್ಕೆ	0	8
ಕತ್ತೇಜೋಜೆ 1ಕ್ಕೆ	0	4
ತಲೇ ಜೋಜೆ 1ಕ್ಕೆ	0	2

2. ಯಾವ ಮನುಷ್ಯನೇ ಆಗಲಿ ಮೇಲ್ಕಂಡಂತೆ ತೀರ್ವೆಯನ್ನ ಪಾವತೀ ಮಾಡಿ ಅಮಲ್‌ದಾರ್ ಯಾ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್ ಅಥವಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರಿಂದ ಕ್ರಮವಾಗಿ ಅಧಿಕಾರ ಕೊಡಲ್ಪಟ್ಟ ಇತರ ಉದ್ಯೋಗಸ್ಥನಿಂದ ಲೈಸೆನ್ಸ ಪಡೆಯದೆ ಯಾವ ಡಿಸ್ಟ್ರಿಕ್ಟು ಜಂಗ್ಲಿಯಲ್ಲೂಗಲಿ ಸಾದೆಯನ್ನ ಕಡಿಯಕೂಡದು, ಯಾ ಯಿದ್ದಲು ಸುಡಕೂಡದ್ದು ಧ್ರಾ ಯಿವನ್ನ ಸಾಗಿಸಲೂ ಕೂಡದು. ಸಾದೆ ಕಡಿಯುವ ಯಾ ಯಿದ್ದಲು ಸುಡುವವರೆಲ್ಲರೂ, ಲೈಸೆನಿನ ಷರತ್ತುಗಳ ಮೇರಿಗೂ ವ ಫಲಾನಬುಗೆಯ ಗಿಡಗಳನ್ನ ಫಲಾನೆ ರೀತಿ ಕಡಿದು ಸಾಗಿಸತಕ್ಕದ್ದೆಂಬ ವಿಷಯದಲ್ಲಿ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ಲವರ ಮಂಜೂರಾತಿನಿಸಿ ಡೆಪ್ಯುಟಿ ಕಮ್ಮಿಷನರು ವಿಧಿಸುವ ನಿಬಂಧನೆಗಳ ಮೇರಿಗೂ ನಡೆದುಕೊಳ್ಳತಕ್ಕದ್ದು.

3. ಲೈಸೆನಿನಲ್ಲಿ ನಮೂದಾದ ವಾಯಿದೆಯೊಳಗಾಗಿ ಲೈಸೆನ್ಸದಾರನು ಸಾದೆಯನ್ನಾಗಲಿ ಇದ್ದಲನ್ನಾಗಲಿ ಸಾಗಿಸಲಿಕ್ಕೆ ತಪ್ಪಿದರೆ ಲೈಸೆನ್ಸ ರದ್ದಾಗುವದಲ್ಲದೆ ಲೈಸೆನ್ಸ ಫೀ ವೊಬಲಗು ವಾಪಸ್ ಪಡೆಯಲಿಕ್ಕೆ ಹಕ್ಕುದಾರ ಇರುವದಿಲ್ಲ.

4. ಲೈಸೆನಿನಲ್ಲಿ ಕಂಡ ತೇದಾದೆಲ್ಲವೂ ವೊಟ್ಟಿಗೆ ಬಂದೇ ದಫಾ ಸಾಗಿಸಲ್ಪಡತಕ್ಕದ್ದು.

5. ಲೈಸೆನ್ಸದಾರನು ತನ್ನ ಲೈಸೆನಿನಲ್ಲಿ ನಮೂದಾದ ಜಂಗ್ಲಿಯಲ್ಲಿ ಪೂರಾ ತೇದಾದು ದೊರೆಯಲಿಲ್ಲವೆಂಬ ಕಾರಣದ ಮೇಲೆ ಇತರ ಜಂಗಲಿನಲ್ಲಿ ಸಾದೆ ಕಡಿಯಲಿಕ್ಕೆ ಯಾ ಇದ್ದಲು ಸುಡಲಿಕ್ಕೆ ಹಕ್ಕುದಾರವಳ್ಳವನಾಗಿರುವದಿಲ್ಲ.

6. ಬಂದು ಲೈಸೆನಿನ ಮೇರಿಗೆ ಸಾಗಿಸಲ್ಪಡತಕ್ಕ ಭಂಡೀ ಜೋಜೆಗಳ ಚಡಸಂಖೆ 25 ಇರತಕ್ಕದ್ದು ಮತ್ತು ಬಂದ್ ಆದ ಜಂಗ್ಲಿಗಾಗಿ ಲೈಸೆನ್ಸ ಕೊಡಲ್ಪಡತಕ್ಕದ್ದಲ್ಲವು.

7. ಯಾವದಾದರೊಂದು ಜಂಗ್ಲಿಯನ್ನಾಗಲಿ ಯಾ ಅದರ ಭಾಗಗಳನ್ನಾಗಲಿ ಬಂದ್ ಮಾಡುವದಕ್ಕೂ ಅಂಥಾ ಜಂಗ್ಲಿಯಲ್ಲಿ ಯಾವ ಸಾದೆಯನ್ನೂ ಕಡಿಯದಂತೆಯೂ ಇದ್ದಲನ್ನ ಸುಡದಂತೆಯೂ ನಿಷೇಧಿಸಲಿಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರತಕ್ಕದ್ದು.

8. ಯಾವ ಮನುಷ್ಯನಾಗಲಿ ಬಂದಾದ ಜಂಗಲಿನಲ್ಲಿ ಸಾದೆ ಕಡದು ಯಾ ಇದ್ದಲು ಸುಡುತ್ತಿದ್ದರೆಯಾಗಲಿ ಅಥವಾ ಸಾದೆ ಯಾ ಇದ್ದಲನ್ನ ಸಾಗಿಸುತ್ತಿದ್ದರೆಯಾಗಲಿ ಅಥವಾ ಮೊಕರರಾದ ಜಂಗ್ಲಿಗಾಗಿ ಕೊಡಲ್ಪಟ್ಟ ಲೈಸೆನಿನಲ್ಲಿ ನಮೂದಾದ ಭಂಡೀ ಜೋಜೆಗಳ ಸಂಖೆಗಿಂತಲೂ ಜಾಸ್ತಿಯಾಗಿ ಸಾದೆ ಯಾ ಇದ್ದಲು ಸಾಗಿಸುತ್ತಿದ್ದರೆಯಾಗಲಿ, ಅಥವಾ ವಾಯಿದೆ ಗತಿಸಿಹೋದಂತಾ ಲೈಸೆನಿನೊಂದಿಗೆ ಸಾದೆ ಯಾ ಇದ್ದಲನ್ನ ಸಾಗಿಸುತ್ತಿರುವ ಯಾವ ಮನುಷ್ಯನಾಗಲಿ ಲೈಸೆನ್ಸ ಇಲ್ಲದೇನೇ ಸಾದೆ ಕಡಿದು ಯಾ ಇದ್ದಲು ಸುಟ್ಟು ಸಾಗಿಸುವ ಮನುಷ್ಯನಂತೆಯೇ ಯೇಣಿಸಲ್ಪಡತಕ್ಕದ್ದು.

9. ವಾಸ್ತವ್ಯವಾಗಿ ಸಾಗುವಳೀದಾರ್ ರೈತರ ಸ್ವಂತ ಉಪಯೋಗಕ್ಕಾಗಿಯೇ ಪ್ರತ್ಯೇಕಿಸಲ್ಪಟ್ಟ ಜಂಗಲ್ ಪ್ರದೇಶಗಳಲ್ಲಿ ಸಾದೆ ಕಡಿದು ಸಾಗಿಸತಕ್ಕ ಬಗ್ಯಾಗಲಿ ಯಾ ಇದ್ದಲು ಸುಟ್ಟು ಸಾಗಿಸತಕ್ಕ ಬಗ್ಯಾಗಲಿ ತೀರ್ವೆ ತೀರಿಸುವ ಲೈಸೆನ್ಸ ಕೊಡಲ್ಪಡತಕ್ಕದ್ದಲ್ಲವು.

10. ತೀರ್ವೆ ಮೊಕರರಾತೀ ವಿಷಯದಲ್ಲಿ ಮೇಲ್ಕಂಡ ನಿಬಂಧನೆಗಳು ಕಂದಾಯ ತೆರುವ ರೈತರು, ವ ಮೊಹತರ್ಫಾ ತೆರುವಂಥಾ ಕಬ್ಬಿಣ ಕರಗಿಸುವವರು ವ ಲೋಹಾರರು ಇವರುಗಳಿಗೆ ಹಾಲೀ ಜಾರೀ ಇರುವ ಹಕ್ಕು ಅಂದರೆ ಸಾದೆ ಯಾ ಇದ್ದಲನ್ನ ವಾಸ್ತವ್ಯವಾಗಿ ಸ್ವಂತ ಉಪಯೋಗಕ್ಕೋಸ್ಕರ ಮುಫತ್ತಾಗಿ ಪಡೆಯುವ ಸ್ವಾತಂತ್ರ್ಯವನ್ನ ಬಾಧಕ ಪಡಿಸುವದಿಲ್ಲವು. ಅಂಥಾ ಜನರೂ (ಆತಿಕ್ರಮಿಸಿ ನಡೆದಲ್ಲಿ ಹಕ್ಕುದಾರೀ ಕಳೆದುಕೊಳ್ಳುವ ರೈತರುಗಳ ವಿನಾ) ಸಾದೆ ಕಡಿಯಲಿಕ್ಕೆ ಮಾಫೀ ಲೈಸೆನ್ಸ ಪಡೆಯಲು ಬದ್ಧರಾಗಿರುವದಲ್ಲದೆ ಅಂತಾ ಲೈಸೆನ್ಸಗಳ ಷರತ್‌ಬಂದೀ ಮೇರಿಗೆ ನಡೆದುಕೊಳ್ಳತಕ್ಕದ್ದು. ಮುಫತ್ತಾಗಿ ಪಡೆದುಕೊಂಡ ಸಾದೆಯಾಗಲಿ ಇದ್ದಲಾಗಲಿ ಮಾರಲ್ಪಡಕೂಡದು. ಯಾ ಮತ್ತೊಂದು ಪದಾರ್ಥಕ್ಕೆ ಬದಲಿಯಾಗಿ ಕೊಡಲ್ಪಡಕೂಡದು ಅಥವಾ ವ್ಯಾಪಾರದ ಬಗ್ಯಾಗಿ ಮತ್ಯಾವ ರೀತಿಯಿಂದಲೂ ಉಪಯೋಗಿಸಲ್ಪಡಕೂಡದು.

11. ಈ ಕೆಳಗೆ ನಮೂದಾಗುವ ಗಿಡಗಳು ಸಾದೇ ಬಗ್ಯೆ ಕಡಿಯಲೂ ಕೂಡದು ಯಾ ಯಿದ್ದಲಿಗಾಗಿ ಸುಡಲೂ ಕೂಡದು ಅವು ಯಾವವಂದರೆ.

ಮನ್ನಾ ಜಾತಿ ಗಿಡಗಳು.

ಸಂದಲ್, ತೇಗ, ಕುಮೆ, ಕರೀಮರ, ಹೊನ್ನೆ, ಜಾಲಾರಿ, ನೆಂದಿ, ಹೆಬ್ಬಲಸು, ಕಾರಾಚಿ, ಬಿಳೀಮತ್ತಿ ವ ಕರೀಮತ್ತಿ.

ಉಳಿಸಿಕೊಳ್ಳಲ್ಪಡದ ಜಾತಿಗಳು.

ಹುಣಾಲ್, ಮಾಕಿ, ಯತ್ತಿಗ, ಜಂಬಿ, ಬಿಲ್ವಾರ, ತಡಸಲು, ಮಾವು, ಹುಣಸೆ, ಕೆಂದ್ಹಾಲ, ನೇರಳೆ, ಬಾಗಿ, ಜೋಗಿ, ಹಡಗ, ಭಾರಂಗಿ, ಸಂಪಿಗೆ, ನಂಜೆ, ಗಂಡಿ, ಹಲಸು, ಕುಲ್ಲುಗರಿಗೆ, ಗಂಡಗರಿಗೆ, ವಾಟೆ, ಅಳಲೇಕಾಯಿ, ದಾಳಚಿನ್ನಿ, ಕಾಜು, ಗೇರು, ಗಾಂಜೋಜಿ

ಲ್ಲುಬಾಗೆ, ಬೇವು, ನಾಯಿದೇಲಾ, ಕಗ್ಗಲಿ ವ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರಿಂದ ನಿಷೇಧಿಸಲ್ಪಟ್ಟು ಗಜೆಟ್ಟಿನಲ್ಲಿ ಘಾಯಿಷ್ ಣಾಗುವಂತಾ ಇತರ ಜಾತಿ ಮರಗಳು.

12. ಸ್ವಂತ ಯಾ ಇನಾಂ ಜಮೀನಿನಲ್ಲಿ ಕಡಿಯಲ್ಪಟ್ಟು ವ್ಯಾಪಾರ ಯಾ ಮತ್ಯಾವ ಬಗ್ಯಾಗಲಿ ಸಾಗಿಸಲ್ಪಡುವಂತಾ ತಮೂಂ ದೆ ಯಾ ಸುಡಲ್ಪಟ್ಟು ಸಾಗಿಸಲ್ಪಡುವಂಥಾ ಇದ್ದಲಿಗಾಗಿ ಮತ್ತು ಹರ್‌ಮೇಜಸ್ಟೀಸ್ ಕೆಮೆಯಿಂದ ಬರುವಂತಾ ಯಲ್ಲ ಸಾದೆ ಯಾ ಇದ್ದ ಲಿಗಾಗಿ ಅಮಲ್‌ದಾರ್ರಿಂದಾಗಲಿ, ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರಿಂದಾಗಲಿ, ಯಾ ಆ ಬಗ್ಯೆ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರಿಂದ ಕ್ರ ಮವಾಗಿ ಅಧಿಕಾರ ಹೊಂದಿದಂತಾ ಇತರ ಸರ್ಕಾರ್ ಉದ್ಯೋಗಸ್ಥನಿಂದಲಾಗಲಿ ಮಾಫೀ ಲೈಸೆನ್ಸನ್ನ ಪಡೆಯತಕ್ಕದ್ದು. ಆ ಮೇರಿಗೆ ಲೈ ಸೆನ್ಸನ್ನೀ ಸಾಗಿಸಲ್ಪಡುವ ಸಾದೆ ಯಾ ಇದ್ದಲಿಗಾಗಿ ಸದರೀ ವಿಧಿಸೋಣಾದ ತೀರ್ವೆ ಮಾಫ್ ಮಾಡಲ್ಪಡುವೆದು.

13. ಲೈಸೆನ್ಸ್ ಯಿಲ್ಲದೆ ಯಿರುವಂಥಾ ಸಾದೆ ಯಾ ಯಿದ್ದಲು ಯಾವ ಸ್ಥಳಕ್ಕೆ ಸಾಗಿಸಲ್ಪಡುತ್ತೋ ಆ ಸ್ಥಳಕ್ಕೆ ಕೀರುವಾಗ ಭಂಡಿಗಳ ಸಂಖೆಯಮೇಲೆ ತೀರ್ವೆ ತೆರಲಿಕ್ಕೆ ಗುರಿಯಾಗಿರತಕ್ಕದ್ದಲ್ಲವೆ ಅಂಥಾ ತೀರ್ವೆಯು, ತಾಲ್ಲೂಕಿನವರಿಂದಲಾಗಲಿ, ಡೆಪ್ಯುಟಿ ಕಮ್ಮಿ ಷನರವರು ಪೊಕರರ್ ಮಾಡುವಂಥಾ ಇತರರಿಂದಲಾಗಲಿ, ವಸೂಲ್ ಮಾಡಲ್ಪಡತಕ್ಕದ್ದು ಮತ್ತು ವಿಧಿಸೋಣಾದ ನಮೂನೆಯಲ್ಲಿ ಪೊಂ ದು ಅಚ್ಚೊತ್ತಾಕಿದ ಪಾಸ್ ಕೊಡಲ್ಪಡತಕ್ಕದ್ದು.

14. ಬೆಂಗಳೂರು ಷಹರ್ ಅಥವಾ ಸಿವಿಲ್ ವ ಮಿಲಟರಿ ಸ್ಟೇಷನಿನೊಳಗೆ ಕರಗಡಿ ಯಾ ಉಗಯೋಗಕ್ಕಾಗಿ ಲೈಸೆನ್ಸಗಳ ಮೇರಿಗೆ ಸಾದೆ ಅಥವಾ ಇದ್ದಲು ತರುವಂತಾ ದರೋಬಸ್ತು ಜನಗಳು ಅಂತಾ ಲೈಸೆನ್ಸಗಳನ್ನ ಷಹರ್ ಯಾ ಸಿವಿಲ್ ವ ಮಿಲಟರಿ ಸ್ಟೇ ರ್ಷ ಇವುಗಳ ಬಳಿಯಣ ಉಕ್ತಷದಲ್ಲಿರುವ ಫಾರೆಸ್ಟ್ ಉದ್ಯೋಗಸ್ಥರ ವಶಕ್ಕೆ ವೊಪ್ಪಿಸತಕ್ಕದ್ದು. ಅವರು ಲೈಸೆನ್ಸ ಮೇರಿಗೆ ತೇದಾ ದನ್ನ ಅಜಮಾಯಿಷಿ ಮಾಡಿ, ಅಜಮಾಯಿಷಿ ಯಾವ ಬಗೆಯಲ್ಲಿ ಮಾಡಲ್ಪಟ್ಟಿಪ್ಪೋ ಅದು, ತಾರೀಖು ವ ಅಜಮಾಯಿಷಿ ಮಾಡಿದವನ ರಜಾನಿ ಪ್ರತಿ ಲೈಸೆನ್ಸ ಮೇಲೂ ಷರಾ ನಮೂದಿಸತಕ್ಕದ್ದು ಇಂತಾ ಲೈಸೆನ್ಸಗಳು ಬಾಗಲುಗಳ ಬಳಿ ವಸೂಲು ಮಾಡಲ್ಪಟ್ಟು ಆ ವೈಕಿ ಫಾರೆಸ್ಟು ಆಫೀಸರುಗಳಿಂದ ಕೊಡಲ್ಪಟ್ಟಂಥಾವುಗಳನ್ನ ಫಾರೆಸ್ಟ್ ಆಫೀಸರರ ಬಳಿಗೂ, ಇತರ ಲೈಸೆನ್ಸಗಳನ್ನ ಆಪರಾ ಅಮಲ್ ದಾರರುಗಳ ಬಳಿಗೂ ವಾಪಸ್ ಕಳುಹಿಸಲ್ಪಡತಕ್ಕದ್ದು. ಇವು ಆಫೀಸ್ ಪ್ರತಿಗಳೊಂದಿಗೆ ಚಿಕಟಿಯಿಸಲ್ಪಡತಕ್ಕದ್ದು.

ಬಿಮೋಜೀಟ್ ಹುಕುಂ,
ಆರ್. ವಿಜಯೀಂದ್ರರಾವ್,
ಬೇಫ್ ಸೆಕ್ರಟರಿ.

ವಿದ್ಯಾಭ್ಯಾಸದ ಇಲಾಖೆ.

ಸ೯ 1889ನೇ ಇಸವಿ ಮೇ ತಾರೀಖು 6.

ಮೈಸೂರು ದೇೀ ಪರೀಕ್ಷೆ.

ಸ೯ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇೀಯ ಪರೀಕ್ಷೆಗೋಸ್ಕರ ಈ ಕೆಳಗೆ ನಮೂದಿಸಲ್ಪಟ್ಟಂತೆ ಬಹುಮಾನಗಳು ಚಿಂತಾಮಣೀ ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲ್ ಹೆಡ್ ಮಾಸ್ಟರಾದ, ಆಳಿಂಗ್ಯಾಚಾರ್ಯರಿಂದ ಕೊಡಲ್ಪಡುವವೆ:—

(i) ೩ಡ್ಲಘಟ್ಟ ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲಿನಲ್ಲಿ ತೇರ್ಗಡೆ ಹೊಂದುವವರ ವೈಕಿ 'ಕನ್ನಡ ಭಾಷಾ ಗ್ರಂಥಗಳಲ್ಲಿ' ಅಧಿಕವಾದ ನಂಬರುಗಳನ್ನ ಪಡೆಯುವಂಥಾ ದೇೀ ಪರೀಕ್ಷಾ ವಿದ್ಯಾರ್ಥಿಗೆ 'ಕನ್ನಡ ಸಟೀಕಾ ಗುರುಬಾಲಪ್ರಬೋಧಿಕ'.

(ii) ೩ಡ್ಲಘಟ್ಟ ತಾಲ್ಲೂಕು ಗವರ್ಣಮೆಂಟು ಕನ್ನಡ ಸ್ಕೂಲಿನಲ್ಲಿ ತೇರ್ಗಡೆ ಹೊಂದುವವರ ವೈಕಿ 'ಗಣಿತದಲ್ಲಿ' ಅಧಿಕವಾದ ನಂ ಬರುಗಳನ್ನ ಪಡೆಯುವಂಥಾ ದೇೀ ಪರೀಕ್ಷಾ ವಿದ್ಯಾರ್ಥಿಗೆ.— 'ಅಷ್ಟಾದಶಪರ್ವ ಕನ್ನಡ ಮಹಾಭಾರತ ಮೂಲ.'

(iii) ಸ೯ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇೀಯೋಪಾಧ್ಯಾಯರ ಪರೀಕ್ಷೆಯಲ್ಲಿ ಕನ್ನಡದಲ್ಲಿ ತೇರ್ಗಡೆಯಾ ಗುವವರ ವೈಕಿ 'ಶಾಸ್ತ್ರ'ದಲ್ಲಿ' ಮೈಸೂರು ೀಮೆಯಲ್ಲಿ ಅಧಿಕವಾದ ನಂಬರುಗಳನ್ನ ಪಡೆಯುವಂಥಾವರಿಗೆ ಮೂವ್ವತ್ತೆನಾ ಲ್ಕು ಸಂಧಿಗಳುಳ್ಳ ಸಟೀಕಾ ಕನ್ನಡ ಜೈಮಿನಿ ಭಾರತ ಎಂದು ಓದತಕ್ಕದ್ದು.

ಸ೯ 1889ನೇ ಇಸವಿ ಜೂ೯ ತಾರೀಖು 19.

ಮೈಸೂರು ದೇೀಯ ಪರೀಕ್ಷೆ.

ಸ೯ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇೀಯ ಪರೀಕ್ಷೆಗಾಗಿ, ಈ ಕೆಳಗೆ ನಮೂದಿಸಿರುವಂತೆ, ಬಹುಮಾನಗಳು, ಕಾರ್ಕಾಹಳ್ಳೀ ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರಾದ ತಿಮ್ಮಪ್ಪಯ್ಯನವರಿಂದ ಕೊಡಲ್ಪಡುವವು:—

(i) ಕಾರ್ಕಾಹಳ್ಳೀ ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲಿನಿಂದ ತೇರ್ಗಡೆಹೊಂದುವವರ ವೈಕಿ ಗಣಿತದಲ್ಲಿ ಅಧಿಕಾವಾದ ನಂಬರುಗಳನ್ನ ಹೊಂದುವಂಥಾ ದೇೀಪರೀಕ್ಷಾ ವಿದ್ಯಾರ್ಥಿಗೆ—ಅಷ್ಟಾದಶಪರ್ವ ಕನ್ನಡ ಮಹಾಭಾರತ.

(ii) ಕಾರ್ಕಾಹಳ್ಳೀ ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲಿನಿಂದ ತೇರ್ಗಡೆಹೊಂದುವವರ ವೈಕಿ ಕನ್ನಡಭಾಷಾ ಗ್ರಂಥಗ ಳಲ್ಲಿ ಅಧಿಕವಾದ ನಂಬರುಗಳನ್ನ ಹೊಂದುವಂಥಾ ದೇೀಪರೀಕ್ಷಾ ವಿದ್ಯಾರ್ಥಿಗೆ—ಶಬ್ದಮಣಿದರ್ಪಣ, ಬಂಗಳೂರು ಛಾಪೆ.

ಎಲ್. ರೈಸ್,
ಎಜ್ಯುಕೇಷನ್ ಸೆಕ್ರಟರಿ.